www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 2 ಫೆಬ್ರವರಿ 2013
Volume : IX Issue : II February 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಕಾಪಾಡಿಕೊಳ್ಳು – ವಯಸ್ಕರ ಸ್ವರ
3. ಯೌವನಸ್ಥರ ಸ್ವರ
4. ಆರೋಗ್ಯ ಸ್ವರ
5. ಪ್ರಶ್ನೋತ್ತರಗಳ ಸ್ವರ
6. ಅನಾಥರ ಸ್ವರ
7 ಸ್ಥಳೀಯ ಮತ್ತು ವಿದೇಶ ಸುದ್ಧಿ
8. ಪ್ರಾರ್ಥನಾ ಸ್ವರ
9. ತಿಳುವಳಿಕೆಯ ಸ್ವರ
10. ಭಾರ ವಹಿಸುವವನು
11. ಮಹಿಳೆಯರ ಸ್ವರ
12. ಮಕ್ಕಳ ಸ್ವರ
13. ಡಿಜಿಎಮ್ ಬೇತೇಲ್ ಅಂಕಣ

## ಸಂಪಾದಕರ ಲೇಖನಿಯಿಂದ . . .



ತಂದೆಯಾದ ಪ್ರೀತಿ ಕರ್ತನಾದ ಯೇಸುಕ್ರಿಸ್ತನ ಕೃಪೆ ಪರಿಶುದ್ಧಾತ್ಮನ ಅನ್ಯೋನ್ಯತೆ ಯಾವಾಗಲೂ ವಾಚಕರೆಲ್ಲರೊಂದಿಗೆ ಇರಲಿ ಎಂದು ಹಾರೈಸುತ್ತೇನೆ. ತ್ರೈಯೇಕ ಎಂಬ ಪದವು ಸತ್ಯವೇದದಲ್ಲಿ ಇಲ್ಲದಿದ್ದರೂ ನಮ್ಮ ದೇವರು ತ್ರೈಯೇಕತ್ವವುಳ್ಳವನಾಗಿದ್ದಾನೆಂದು ಸತ್ಯವೇದದ ಸತ್ಯವಚನಗಳಿಂದ ನಾವು ತಿಳಿದುಕೊಳ್ಳಬಹುದು. ಯಾರೋ ನನ್ನ ಸ್ನೇಹಿತರೊಬ್ಬರು ಮುಂಬಾಯಿಯಿಂದ ಒಂದು ಪತ್ರ ಬರೆದಿದ್ದಾರೆ. ತ್ರೈಯೇಕತ್ವದ ಬಗ್ಗೆ ಗಲಿಬಿಲಿಗೊಳಗಾಗಿದ್ದಾರೆ. 1 ಕೊರಿ. 14:33 ದೇವರು ಗಲಿಬಿಲಿಗೆ ಕಾರಣನಲ್ಲ ಎಂದು ಹೇಳುತ್ತದೆ, ವಾಕ್ಯದ ಅಜ್ಞಾನದ ಕಾರಣ ಅನೇಕರು ಗಲಿಬಿಲಿಗೊಳಗಾಗುತ್ತಾರೆ. (ಮತ್ತಾ. 22:29–30, ಹೋಶೆ. 4:6) ಒಬ್ಬನೇ ದೇವರಾದರು ಮೂರು ವ್ಯಕ್ತಿತ್ವಗಳಿವೆ ಯೋಹಾ. 3:16 ದೇವರು ಲೋಕವನ್ನು ಪ್ರೀತಿಸಿ, ಮಗನನ್ನು ಕಳುಹಿಸಿದನು. ಮಗನು ಲೋಕಕ್ಕೆ ಬಂದನು. ಯೋಹಾ. 14:16–17ರಲ್ಲಿ ಯೇಸುಕ್ರಿಸ್ತನು ಹೇಳುತ್ತಿದ್ದಾನೆ, ತಂದೆಯನ್ನು ನಾನು ಕೇಳಿಕೊಳ್ಳುವೆನು. ಆತನು ಬೇರೊಬ್ಬ ಸಹಾಯಕನನ್ನು (ಪವಿತ್ರಾತ್ಮನನ್ನು) ಕಳುಹಿಸುವನು ಎಂದು ಹೇಳುತ್ತಿದ್ದಾನೆ, ಇಲ್ಲಿ ತಂದೆ ಮಗ ಪವಿತ್ರಾತ್ಮನಾದ ತ್ರೈಯೇಕತ್ವವನ್ನು ನೋಡುತ್ತೇವೆ. ಸತ್ಯವೇದದಲ್ಲಿ ಒಬ್ಬನೇ ದೇವರ ಮೂರು ಬೇರೆ ಬೇರೆ ವ್ಯಕ್ತಿತ್ವಗಳನ್ನು ನೋಡುತ್ತೇವೆ. ಕೆಲವರು ಹೇಳುವ ಹಾಗೂ ಬೋಧಿಸುವ ಪ್ರಕಾರ ಯೇಸುವೇ ತಂದೆ, ಯೇಸುವೇ ಮಗನು ಎಂದು ಹೇಳಿ ತ್ರೈಯೇಕತ್ವವನ್ನು ಅಲ್ಲಗಳೆಯುವಂತದ್ದು ಇದು ಅಜ್ಞಾನವಲ್ಲದೆ ಬೇರೇನೂ ಅಲ್ಲ. ನನಗೆ ಪತ್ರ ಬರೆದ ವ್ಯಕ್ತಿ ಒಬ್ಬ ದೇವ ಸೇವಕರ ಅನಾರೋಗ್ಯಕ್ಕೆ ಔಷಧಿಗೆ ಸಹಾಯಕೇಳಿದ್ದು ತಪ್ಪು ಎಂದು ಮತ್ತು ವೈದ್ಯರನ್ನು ನಂಬುವುದೂ ತಪ್ಪು ಎಂದು ಬರೆದಿರುತ್ತಾರೆ. ಅದಕ್ಕೆ 1 ಪೂರ್ವ. 16:12–13 ವಾಕ್ಯ ಕೊಟ್ಟಿದ್ದಾರೆ, ಅನೇಕರು ರೋಗ ಉಲ್ಬಣವಾಗುವವರೆಗೆ ಮೊಂಡು ಹಟಮಾಡಿಕೊಂಡು ಔಷಧಿ ತೆಗೆದುಕೊಳ್ಳದೆ ಕೊನೆಗೆ ಸಾವನ್ನಪ್ಪಿದ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ವೈದ್ಯರನ್ನು ಕೂಡ ದೇವರೇ ಸೃಷ್ಟಿಸಿದ್ದಾನೆ. ಲೂಕ. 5:31 ರಲ್ಲಿ ಕರ್ತನಾದ ಯೇಸುಕ್ರಿಸ್ತನೇ ಹೇಳಿದ್ದಾನೆ, ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು. ಆದಕಾರಣ ಪ್ರಿಯ ವಾಚಕರೆಲ್ಲರಿಗೆ ನನ್ನ ಸಲಹೆ ಒಂದು ವೇಳೆ ಅನಾರೋಗ್ಯ ಬಂದರೆ ಪ್ರಾರ್ಥಿಸಿರಿ. ಅದ್ಭುತ ನಡೆದರೆ ಸ್ತೋತ್ರ. ಇಲ್ಲದಿದ್ದರೆ ವೈದ್ಯರನ್ನು ಭೇಟಿಯಾಗಿ ಸರಿಯಾದ ಚಿಕಿತ್ಸೆಪಡೆದುಕೊಳ್ಳಿರಿ. ವೈದ್ಯಕೀಯ ಚಿಕಿತ್ಸೆ ಪಡೆಯುವುದು ಅಪರಾಧವಲ್ಲ (1 ತಿಮೊ. 5:23). ಲೂಕನ ಸುವಾರ್ತೆ ಬರೆದ ಲೂಕನು ಕೂಡ ವೈದ್ಯನಾಗಿದ್ದನೆಂದು ಸತ್ಯವೇದ ತಿಳಿಸುತ್ತದೆ (ಕೊಲೊ. 4:14). ಆದಕಾರಣ ಪ್ರಿಯ ವಾಚಕ ಸಹೋದರ, ಸಹೋದರಿಯರೇ, ದೇವರ ವಾಕ್ಯವನ್ನು ಚೆನ್ನಾಗಿ ಓದಿ ನಾವು ಅರ್ಥಮಾಡಿಕೊಂಡರೆ ಮತ್ತಾ. 13:23 ಪ್ರಕಾರ 30,60,100ರಷ್ಟು ಫಲಕೊಡಲು ಸಾಧ್ಯವೆಂದು ತಿಳಿದುಕೊಳ್ಳಬಹುದು. ನಾನು ಅದ್ಭುತಗಳನ್ನು ನಂಬುತ್ತೇನೆ, ನಾನು ಪ್ರಾರ್ಥಿಸಿದಾಗ ಮಾರ್ಕ. 16:17–18 ಪ್ರಕಾರ ಕರ್ತನಾದ ಯೇಸುಕ್ರಿಸ್ತನು ಅನೇಕ ಮರಣಕರ ರೋಗಗಳನ್ನು ವಾಸಿ ಮಾಡಿದ್ದಾನೆ. ಕ್ಯಾನ್ಸರ್, ಏಡ್ಸ್, ಟ್ಯುಮರ್, ಮಾನಸಿಕದಂತಹ ರೋಗಗಳು ವಾಸಿಯಾಗಿವೆ ಅದೇ ರೀತಿ ವೈದ್ಯಕೀಯ ಚಿಕಿತ್ಸೆಯನ್ನು ಕೂಡ ನಂಬುತ್ತೇನೆ. ಎಷ್ಟೋ ದೇವಸೇವಕರು ಪ್ರಾರ್ಥಿಸಿ ಅದ್ಭುತಗಳು ನಡೆಯದಿದ್ದರೆ ಸೋತು ಹೋಗಬೇಡಿ. ಜನರಿಗೆ ವೈದ್ಯರ ಬಳಿಗೆ ಹೋಗಿ ಸರಿಯಾದ ಚಿಕಿತ್ಸೆಯನ್ನು ಪಡೆಯಲು ಆಲೋಚನೆ ಕೊಡಿರಿ.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪ್ರಲಾ. 3:49–50 **"ಯೆಹೋವನು ಆಕಾಶದಿಂದ ಕಟಾಕ್ಷಿಸಿ ನೋಡುವ ತನಕ ನನ್ನ ನೇತ್ರವು ನಿರಂತರವಾಗಿ ಅಶ್ರುಧಾರೆಯನ್ನು ಸುರಿಸುವುದು ಎಂದಿಗೂ ಬಿಡದು"**. ನನ್ನ ಪ್ರಿಯ ಸಹೋದರ ಸಹೋದರಿಯರೇ, ಕರ್ತನ ಸಮೀಪಕ್ಕೆ ಬಂದು ನಿಮ್ಮ ಪಾಪಗಳನ್ನು ಪಶ್ಚಾತ್ತಾಪದಿಂದ ಅರಿಕೆ ಮಾಡಿ ಬಿಟ್ಟು ಬಿಡಿರಿ. ಕರ್ತನು ಮೊದಲಿಗಿಂತಲೂ ಅಧಿಕವಾಗಿ ಅಭಿಷೇಕಿಸಿ ಆಶೀರ್ವದಿಸಿ ನಡೆಸುವನು. ಪೇತ್ರನು ಮಾನಸಾಂತರಪಟ್ಟ ನಂತರ ಕರ್ತನು ಅವನನ್ನು ಬಲವಾಗಿ ಉಪಯೋಗಿಸಿದನು. ಅದೇ ಕರ್ತನು ನಿನ್ನೊಂದಿಗಿದ್ದಾನೆ ನಿನ್ನನ್ನು ನಿಶ್ಚಯವಾಗಿ ನಡೆಸುವನು.

**2) ಮಾನಸಾಂತರ ಪಡಬೇಕು :–** ಮಾನಸಾಂತರವೆಂದರೇನು? ನಾನು ತಪ್ಪು ಮಾಡಿದ್ದೇನೆ. ಅದಕ್ಕಿರುವ ದು:ಖವನ್ನು ಪ್ರಕಟಿಸುವುದು. ಒಬ್ಬ ಕಳ್ಳನು ಪೋಲಿಸ್ ಅಧಿಕಾರಿಗಳು ಹಿಡಿದಾಗ ಅಳುತ್ತಾನೆ ಅದು ನಿಜವಾದ ಮಾನಸಾಂತರವಲ್ಲ. ಆದರೆ ಮಾಡಿದ ತಪ್ಪಿನ ಬಗ್ಗೆ ದು:ಖವಿದ್ದು ನಂತರ ಅಮಾರ್ಗದಲ್ಲಿ ಹಿಂತಿರುಗದೆ ತೀರ್ಮಾನದೊಂದಿಗೆ ದೈವೀಕ ಮಾರ್ಗದಲ್ಲಿ ಮುಂದುವರಿಯುವುದೇ ನಿಜವಾದ ಮಾನಸಾಂತರ. ಲೂಕ. 19:10 ರಲ್ಲಿ ಜಕ್ಕಾಯನ ಮಾನಸಾಂತರ ನಿಜವಾದ ಮಾನಸಾಂತರವಾಗಿದೆ ಆತನು ಯೇಸುಕ್ರಿಸ್ತನನ್ನು ಹುಡುಕಿ ಬಂದಾಗ ತನ್ನ ಆಸ್ತಿಯಲ್ಲಿ ಅರ್ಧಭಾಗ ಬಡವರಿಗೆ ಕೊಡುವುದಾಗಿಯೂ ಮತ್ತು ಯಾರಿಗಾದರೂ ನಷ್ಟಮಾಡಿದ್ದರೆ 5ರಷ್ಟು ಹಿಂದಿರುಗಿ ಕೊಡುವುದಾಗಿಯೂ ಹೇಳುವುದನ್ನು ನಾವು ನೋಡುತ್ತೇವೆ.

**3) ಮೊದಲು ಮಾಡುತ್ತಿದ್ದ ಕೃತ್ಯ ಮಾಡು :–** ಅನೇಕರು ಮಾನಸಾಂತರಪಡುತ್ತಾರೆ. ಆದರೆ ಪುನ: ಪುನ: ತಪ್ಪಾದ ಕಾರ್ಯಗಳಲ್ಲಿ ಮುಂದುವರಿಯುತ್ತಾರೆ. ಇನ್ನು ಕೆಲವರು ಬಿದ್ದು ಹೋಗುವುದಕ್ಕೆ ಮುಂಚೆ ಇದ್ದ ಪ್ರಾರ್ಥನಾ ಜೀವಿತ, ಒಳ್ಳೆ ಕಾರ್ಯಗಳು, ಪರೋಪಕಾರ ಮಾಡುವುದನ್ನು ಬಿಟ್ಟು ಬಿಡುತ್ತಾರೆ. ಇನ್ನು ಕೆಲವರು ಒಬ್ಬ ಸಹೋದರನೊಂದಿಗೆ ಅಥವಾ ಸಹೋದರಿಯೊಂದಿಗೆ ದ್ವೇಷ ಇಟ್ಟುಕೊಳ್ಳುವುದು ತಪ್ಪು ಎಂದು ಒಪ್ಪಿ ಮಾನಸಾಂತರಪಡುತ್ತಾರೆ. ಪುನ: ಆ ವ್ಯಕ್ತಿಗಳು ವಾದಕ್ಕೆ ಸಿಕ್ಕಿದ್ದಲ್ಲಿ ಮುಖತಿರುಗಿಸುತ್ತಾರೆ. ನಿಜವಾದ ಮಾನಸಾಂತರವು ಪುನ: ಒಳ್ಳೆಯ ಕಾರ್ಯಗಳಿಗೆ ನಡೆಸುವಂತದ್ದಾಗಿದೆ.

ಪ್ರಕ. 2–5–6 ಮಾನಸಾಂತರಪಡದಿದ್ದರೆ ಉಂಟಾಗುವ ಪರಿಣಾಮ :

ದೀಪಸ್ತಂಭವು ತೆಗೆದು ಹಾಕಲ್ಪಡುವುದು :– ಅಂದರೆ ನಮ್ಮಲ್ಲಿರುವ ಬೆಳಕನ್ನು ಕೆಡಿಸುವುದು. ಒಂದು ದೀಪಸ್ತಂಭವಿದ್ದು ಅದರಲ್ಲಿ ಬೆಳಕು ಇಲ್ಲದಿದ್ದರೆ ಏನು ಪ್ರಯೋಜನ ಬೆಳಕು ಇಲ್ಲದ ಸಭೆಯನ್ನು ಕರ್ತನು ಕಿತ್ತು ತೆಗೆಯುತ್ತಾನೆ ಎಂದು ಅರ್ಥವಾಗಿದೆ. 1 ತಿಮೊ. 3:14–15 **"ಬೇಗನೆ ನಿನ್ನ ಬಳಿಗೆ ಬರುವೆನೆಂದು ನನಗೆ ನಿರೀಕ್ಷೆಯುಂಟು ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ."** ದೇವರು ನಮ್ಮ ಬುಡಕ್ಕೆ ಯಾವಾಗಲೋ ಕೊಡಲಿ ಹಾಕಬೇಕಿತ್ತು ಆದರೆ ಕರ್ತನಾದ ಯೇಸುವಿನ ಬಿನ್ನಹದ ನಿಮಿತ್ತ ಅವಕಾಶಪಡಕೊಂಡಿದ್ದೇವೆ (ಲೂಕ. 13:6–9).

**ವಾಗ್ದಾನ ಹಾಗೂ ಪ್ರತಿಫಲ :**

* **ಜೀವವೃಕ್ಷದ ಹಣ್ಣನ್ನು ತಿನ್ನುವುದಕ್ಕೆ ಕೊಡುವನು :–** ದೇವರು ಆದಿ. 1:26 ರಲ್ಲಿ ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಸೃಷ್ಟಿಸಿದನು. ಆತನಿಗೆ ಆದಿ. 1:28ರಲ್ಲಿ 3 ವಿಧವಾದ ಆಶೀರ್ವಾದಗಳನ್ನು ಕೊಟ್ಟನು.
* ನೀವು ಭೂಮಿಯಲ್ಲಿ ಹೆಚ್ಚಿ ಅಭಿವೃದ್ಧಿಯಾಗಿರಿ. ಬಿ) ಭೂಮಿಯ ಮೇಲೆ ದೊರೆತನಮಾಡಿರಿ, ಸಿ) ಭೂಮಿಯನ್ನು ವಶಪಡಿಸಿಕೊಳ್ಳಿರಿ. ಆದಿ. 2:8 ರಲ್ಲಿ ಏದೆನ್ ಎಂಬ ತೋಟವನ್ನು ಕರ್ತನು ಉಂಟುಮಾಡಿ ಅದರಲ್ಲಿ ತಾನು ಸೃಷ್ಟಿಸಿದ ಮಾನವನನ್ನು ಇರಿಸಿದನು. ದೇವರು ಏದೆನ್ ತೋಟದಲ್ಲಿ ಅನೇಕ ವಿಧವಾದ ಹಣ್ಣಿನ ಮರಗಳನ್ನು ಸೃಷ್ಟಿಸಿದನು ಹಾಗೂ ಆ ತೋಟದಲ್ಲಿ ವಿಶೇಷವಾದ ಎರಡು ಮರಗಳನ್ನು ಉಂಟುಮಾಡಿದನು. 1. ಜೀವವೃಕ್ಷದ ಮರ 2. ಒಳಿತು ಕೆಡುಕಿನ ಅರುಹನ್ನುಂಟು

ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ.
(ಇಬ್ರಿಯ 9:22)

ಮಾಡುವ ಮರ. ನಂತರ ಕರ್ತನು ಮಾನವನಿಗೆ ಆದಿ. 2:15–17 ರಲ್ಲಿ ಒಳಿತು ಕೆಡುಕಿನ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿಂದರೆ ಸಾಯುತ್ತಿ ಎಂದು ಎಚ್ಚರಿಸಿದನು.

**ಈ ಎರಡು ಮರಗಳ ವಿಶೇಷತೆ ಏನೆಂದರೆ :–**

* **ಜೀವವೃಕ್ಷ :** ಈ ಮರದ ಹಣ್ಣನ್ನು ತಿನ್ನುವಂತ ವ್ಯಕ್ತಿ ನಿತ್ಯಕ್ಕೂ ಜೀವಿಸುವನು (ಆದಿ. 3:22).
* **ಒಳಿತು ಕೆಡುಕಿನ ಅರುಹನ್ನುಂಟುಮಾಡುವ ಮರ :–** ಮನುಷ್ಯನನ್ನು ದೇವರು ಸೃಷ್ಟಿಸಿದಾಗ ಮನುಷ್ಯನು ಪಾಪದ ವಿಷಯದಲ್ಲಿ ಅರಿವಿಲ್ಲದವನು ಮಗುವಿನ ಹಾಗೆ ನಿಷ್ಕಳಂಕನೂ ಆಗಿದ್ದನು. ಯಾವಾಗ ಮನುಷ್ಯನು ದೇವರ ಮಾತಿಗೆ ಅವಿಧೇಯನಾಗಿ ಒಳಿತು ಕೆಡುಕಿನ ಅರುಹನ್ನುಂಟು ಮಾಡಿದ ಮರದ ಹಣ್ಣನ್ನು ತಿಂದನೋ ಆಗ ಪಾಪದ ಕುರಿತಾದ ಜ್ಞಾನವನ್ನು ಹೊಂದಿದನು. ಅಂದರೆ ಒಳ್ಳೇದ್ದರ ಹಾಗೂ ಕೆಟ್ಟದ್ದರ ಕುರಿತಾಗಿರುವ ಭೇದ (ಆದಿ. 3:22). ಜೀವವೃಕ್ಷದ ಹಣ್ಣನ್ನು ತಿಂದು ಶಾಶ್ವತವಾಗಿ ಬದುಕಬಹುದಿತ್ತು ಆದರೆ ಮನುಷ್ಯನು ಸರ್ಪದ (ಸೈತಾನನ) ಮಾತಿಗೆ ವಂಚಿಸಲ್ಪಟ್ಟು ಜೀವವೃಕ್ಷದ ಹಣ್ಣನ್ನು ತಿನ್ನುವಂತಹ ಅವಕಾಶವನ್ನು ಕಳೆದುಕೊಂಡನು. ಆದರೆ ತಂದೆಯಾದ ದೇವರು ಕರ್ತನಾದ ಯೇಸುಕ್ರಿಸ್ತನಲ್ಲಿ ನಮಗೆ ಇನ್ನೊಂದು ಸಾರಿ ಜೀವವೃಕ್ಷದ ಹಣ್ಣನ್ನು ತಿನ್ನುವಂತಹ ಅವಕಾಶವನ್ನು ಒದಗಿಸಿಕೊಟ್ಟಿದ್ದಾನೆ. ಯಾರೆಲ್ಲಾ ಜಯದ ಜೀವಿತವನ್ನು ಈ ಲೋಕದಲ್ಲಿ ನಡೆಸುತ್ತಾರೋ ಅವರೆಲ್ಲಾ ಜೀವವೃಕ್ಷದ ಮರದ ಹಣ್ಣನ್ನು ತಿನ್ನುವಂತಹ ಅವಕಾಶವನ್ನು ಹೊಂದುತ್ತಾರೆ. ಆದಿಕಾಂಡ ಪುಸ್ತಕವು ಎಲ್ಲವುಗಳ ಆರಂಭವಾಗಿರುವಂತೆ ಎಫೆಸ ಸಭೆ ಎಲ್ಲಾ ಸಭೆಗಳ ಪ್ರಾರಂಭವಾಗಿದೆ.

**ಪರದೈಸ :–** ಮಾನವ ಚರಿತ್ರೆ ಪರದೈಸಿನಲ್ಲಿ ಪ್ರಾರಂಭವಾಗಿ ಪರದೈಸಿನಲ್ಲಿ ಕೊನೆಗೊಳ್ಳುತ್ತದೆ. ಪರದೈಸ ಎಂಬ ಇಬ್ರಿಯ ಪದಕ್ಕೆ ಉದ್ಯಾನ ಅಥವಾ ತೋಟ ಎಂಬ ಅರ್ಥವಿದೆ. ಸಪ್ತವರ್ಜಂಟ ಭಾಷಾಂತರದಲ್ಲಿ (72 ಯೆಹೂದ ರಬ್ಬಿಗಳು) ಪರದೈಸ್ ಎಂಬಲ್ಲಿ ಏದೆನ್ ಎಂದು ಬರೆದರು. ಏದೆನ್ ಎಂದರೆ ತೋಟ ಎಂದರ್ಥ.

**I. 7 ಭೂಮಿಗಳಿರುವಂತೆ 7 ಪರದೈಸಗಳಿವೆ.**

* 7 ಭೂಮಿಗಳು
* ಆದಿ. 1:1 ದೇವರು ಸೃಷ್ಟಿಸಿದ ಪರಿಪೂರ್ಣವಾದ ಭೂಮಿ.
* ಆದಿ. 1–2 ಪರಿಪೂರ್ಣತೆಯನ್ನು (ಕ್ರಮವನ್ನು) ಕಳಕೊಂಡ ಭೂಮಿ
* ಆದಿ. 1:3–31, 3:24 ಪರಿಪೂರ್ಣತೆಯನ್ನು ಕಳಕೊಂಡ ಭೂಮಿಯನ್ನು ದೇವರು ಕ್ರಮಪಡಿಸಿದ ಭೂಮಿ (ಆದಾಮನ ಭೂಮಿ).
* ಜಲಪ್ರಳಯಕ್ಕಿಂತ ಮುಂಚಿನ ಭೂಮಿ.
* ಜಲಪ್ರಳಯದ ನಂತರದ ಈಗಿನ ನಾವಿರುವ ಭೂಮಿ.
* ಸಾವಿರ ವರ್ಷದ ಆಳ್ವಿಕೆ ಸಮಯದ ಭೂಮಿ.
* ನೂತನ ಭೂಮಿ (ಹೊಸ ಭೂಮಿ) ಪ್ರಕ. 21:1.

**II. 7 ಪರದೈಸುಗಳು :–**

* ಪರಲೋಕದ ಪರದೈಸು (ಪ್ರಕ. 4:1–11, ಕೀರ್ತ. 84:1).
* ಲೂಸಿಫರ್‌ನ ಪರದೈಸು (ಯೆಶಾ. 14:12–15, ಯೆಹೆ. 28:11–15).
* ಆದಾಮನ ಭೂಪರದೈಸು (ಆದಿ. 2:8).
* ಹಳೆ ಒಡಂಬಡಿಕೆ ಭಕ್ತರ ಆತ್ಮಗಳು ಇದ್ದ ಪರದೈಸು (ಆದಿ. 37:35).
* ಹೊಸ ಒಡಂಬಡಿಕೆಯ ಭಕ್ತರ ಆತ್ಮಗಳಿರುವ ಪರದೈಸು(ಎಫೆ. 4:6–8, ಕೀರ್ತ. 68:18, 2 ಕೊರಿ. 12:2–6).
* ಸಾವಿರ ವರ್ಷದ ಪರದೈಸು (ಪ್ರಕ. 20:1–7).
* ನೂತನ ಭೂಮಿ ಎಂಬ ಪರದೈಸು (ಪ್ರಕ. 22:1–6).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು.
(1 ಥೆಸ 5:24)

# ಕಾಪಾಡಿಕೊಳ್ಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ"** (ಯೂದ. 1:21).

ನಮ್ಮ ಬಳಿಯಲ್ಲಿ ಚಿನ್ನ, ಬೆಳ್ಳಿ, ಆಭರಣಗಳನ್ನು ಅಥವಾ ಬೆಲೆಬಾಳುವ ವಸ್ತುಗಳನ್ನು ಹೆಚ್ಚು ಬಾಳ್ವಿಕೆಗೆ ಬರಬೇಕಾದರೆ ನಾವು ಅದನ್ನು ಹೆಚ್ಚಾಗಿ ಜೋಪಾನವಾಗಿ ಕಾಪಾಡಬೇಕಾಗಿದೆ. ನಾವು ಯಾವುದೇ ವಸ್ತುವನ್ನು ಅಸಡ್ಡೆಮಾಡುವುದಾದರೆ ಅದನ್ನು ನಾವು ಕಳೆದುಕೊಳ್ಳಬೇಕಾಗಿದೆ. ಮೇಲಿನ ವಾಕ್ಯ ಹೇಳುತ್ತದೆ, ಯೇಸುಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ. ದೇವರ ಪ್ರೀತಿಯು ಪವಿತ್ರಾತ್ಮನ ಮೂಲಕವಾಗಿ ಧಾರಳವಾಗಿ ನಮ್ಮ ಹೃದಯದಲ್ಲಿ ಸುರಿಯಲ್ಪಟ್ಟಿರುತ್ತದೆ (ರೋಮ. 5:5). ಪ್ರೀತಿಯು ದೇವರಿಂದಾಗಿದೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ. ನಾವು ನಿಜವಾಗಿ ದೇವರನ್ನು ಪ್ರೀತಿಸುವಾಗಲೇ ಎಲ್ಲಾ ತ್ಯಾಗಕ್ಕೂ ಸಿದ್ಧರಾಗುತ್ತೇವೆ. ಆತನಿಗಾಗಿ ಹಿಂಸೆ, ಸಂಕಟ, ಅವಮಾನ ಲೆಕ್ಕಿಸದೆ ಮುಂದೆ ಹೋಗಲು ಸಾಧ್ಯ. ದೇವರು ನಮ್ಮ ಬಳಿ ಕೊಟ್ಟಿರುವುದನ್ನು ನಾವು ಬೆಲೆಕಟ್ಟಲಾಗದಷ್ಟು ಅಮೂಲ್ಯವಾದದ್ದು ಸತ್ಯವೇದವು. ಅಮೂಲ್ಯವಾದುದ್ದನ್ನು ಕಳೆದುಕೊಳ್ಳದೆ ಕಾಪಾಡಿಕೊಳ್ಳಬೇಕೆಂದು ಕರೆ ನೀಡುತ್ತದೆ.

**ಎಚ್ಚರಿಕೆಯ ಸ್ವರ**

**ಹೃದಯವನ್ನು ಕಾಪಾಡಿಕೋ** (ಜ್ಞಾನೋ. 4:23). ಮನುಷ್ಯನಲ್ಲಿ ಮುಖ್ಯವಾದ ಭಾಗವೇ ಹೃದಯ. ಹೃದಯದ ಬಡಿತವೇ ನಿಂತು ಹೋದರೆ ಮನುಷ್ಯನು ಸತ್ತು ಹೆಣವಾಗುವನು. ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಬರುವುದು (ಲೂಕ. 6:45). ಹೃದಯದಲ್ಲಿ ದ್ವೇಷ, ಕಹಿ, ಮೋಸ ತುಂಬಿಕೊಂಡಿರುವಾಗ ಬಾಯಿ ತೆರೆಯುವಾಗಲೇ ಕೆಟ್ಟ ಮಾತು, ಸುಳ್ಳು ಮಾತು ಎಲ್ಲವೂ ಹೊರಡುತ್ತದೆ. ಆದರೆ ಹೃದಯದಲ್ಲಿ ದೇವರ ವಾಕ್ಯವು ತುಂಬಿರುವುದಾದರೆ ಮಾತನಾಡುವಾಗ ದೇವರ ವಾಕ್ಯವೇ ಬರುವುದಲ್ಲವೆ. ದಾವೀದನು ಬರೆಯುತ್ತಾನೆ, **"ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ"** (ಕೀರ್ತ. 119:11). **"ದೇವರ ಧರ್ಮೋಪದೇಶವು ಅವನ ಹೃದಯದಲ್ಲಿರುವುದು ಅವನು ಜಾರುವುದೇ ಇಲ್ಲ"** (ಕೀರ್ತ. 37:31). ದೇವ ಮಗುವೇ, ನಿನ್ನ ಹೃದಯವನ್ನು ಬಹುಜಾಗರೂಕನಾಗಿ ಕಾಪಾಡಿಕೋ. ಸೃಷ್ಟಿಕರ್ತನಾದ ಯೇಸುಕ್ರಿಸ್ತನಿಗೆ ಮತ್ತು ನಿಮ್ಮ ಹೃದಯದಲ್ಲಿ ಜಾಗ ಕೊಡು. ಸಿಟಿ ಬಸ್ಸ್‌ತರ ಸಿಕ್ಕಸಿಕ್ಕವರಿಗೆ ನಿನ್ನ ಒಳಗಡೆ ಸ್ಥಳಕೊಡಬೇಡ. ದೇವರು ನಿನ್ನ ಹೊರಗಿನ ಅಂದವನ್ನು, ಭಕ್ತಿಯನ್ನು ನೋಡದೆ ಹೃದಯವನ್ನು ನೋಡುವನಾಗಿದ್ದಾನೆ (1 ಸಮು. 16:7). ವಿಶ್ವಾಸಿಗಳಾದ ಅನನೀಯ, ಸಪ್ಫೈರರು ಹೃದಯದಲ್ಲಿ ಸೈತಾನನಿಗೆ ಅವಕಾಶಕೊಟ್ಟು ವಂಚಿಸಲ್ಪಟ್ಟು ಮರಣ ಹೊಂದಿದರು (ಅ.ಕೃ. 5:4). ಒಂದು ಸಲ ಭಕ್ತನಾದ ಸಾಧು ಸುಂದರ್ ಸಿಂಗ್‌ರ ತಂದೆಯು ಅವರನ್ನು ದಾಂಪತ್ಯ ಜೀವಿತದಲ್ಲಿ ಸಿಕ್ಕಿಸಬೇಕೆಂದು ತೀರ್ಮಾನಿಸಿ ಕೆಲವು ಯುವತಿಯರನ್ನು ಆತನ ಮುಂದೆ ನಿಲ್ಲಿಸಿ ನಿನಗಿಷ್ಟವಾದ ಹುಡುಗಿಯನ್ನು ಆರಿಸಿಕೊ ಎಂದು ಒತ್ತಾಯಿಸಿದ್ದಾಗ ಸಾಧುಸುಂದರ್‌ಸಿಂಗ್ ಒಮ್ಮೆ ಅವರೆಲ್ಲರನ್ನು ದೃಷ್ಟಿಸಿ ತಂದೆಯ ಬಳಿ ಹೀಗೆಂದರಂತೆ. "ನನಗಿರುವ ಒಂದೇ ಹೃದಯವನ್ನು ನಾನು ಕ್ರಿಸ್ತನಿಗಾಗಿ ಈಗಾಗಲೇ ಕೊಟ್ಟಿದ್ದೇನೆ. ಇವರಿಗಾಗಿ ಹೃದಯವನ್ನು ಎಲ್ಲಿಂದ ತರಲಿ? ಎಂದು ನಿರಾಕರಿಸಿದರು. ಯೆರೆಮೀಯನು ಬರೆಯುತ್ತಾನೆ, **"ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ"** (ಯೆರೆ. 17:9). ಮಂತ್ರವಾದಿಯಾದ ಸೀಮೋನನು ಸುವಾರ್ತೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಪವಿತ್ರಾತ್ಮನ ಅಭಿಷೇಕಕ್ಕಾಗಿ ಹಣವನ್ನು ಅಪೋಸ್ತಲರ ಕೈಗೆ ಕೊಟ್ಟು ನನಗೂ ಆ ಅಧಿಕಾರವನ್ನು ಕೊಡಿರಿ ಎಂದಾಗ ಪೇತ್ರನು ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ (ಅ.ಕೃ. 8:9–22). ಎಂದು ಅವನನ್ನು ಎಚ್ಚರಿಸಿದನು. **"ಹೃದಯ ಶುದ್ಧಿಯನ್ನಪೇಕ್ಷಿಸುವ ಸವಿಮಾತನಾಡುವ ಮನುಷ್ಯನಿಗೆ ರಾಜನ ಸ್ನೇಹವು ದೊರೆಯುವುದು"** (ಜ್ಞಾನೋ. 22:11).

**ಉಪದೇಶವನ್ನು ಕಾಪಾಡಿಕೊ** (ಪ್ರಕ. 3:3). ಕೇಳಿದ ಉಪದೇಶವನ್ನು ಬಿಟ್ಟುಬಿಡದೆ ಕಾಪಾಡಿಕೊಳ್ಳಬೇಕಂದು ಸತ್ಯವೇದ ಹೇಳುತ್ತದೆ, **"ನೀನು ನಡೆಯುವಾಗ ಆ ಉಪದೇಶವು ನಿನ್ನನ್ನು**

ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ.
(ಫಿಲಿಪ್ಪಿ 4:13)

**ನಡಿಸುವುದು. ಮಲಗಿಕೊಂಡಾಗ ಕಾಯುವುದು. ಎಚ್ಚರಗೊಂಡಾಗ ನಿಮ್ಮೊಂದಿಗೆ ಮಾತನಾಡುವುದು** (ಜ್ಞಾನೋ. 6:22). **"ಸದುಪದೇಶವನ್ನು ಹಿಡಿ, ಸಡಿಲಬಿಡಬೇಡ; ಅದನ್ನು ಕಾಪಾಡಿಕೋ, ಅದೇ ನಿನ್ನ ಜೀವವು"** (ಕೀರ್ತ. 4:13). ಉಪದೇಶವನ್ನು ಕಾಪಾಡಿಕೊಳ್ಳುವವನು ಸುರಕ್ಷಿತನಾಗಿರುವನು. ಉಪದೇಶಕ್ಕೆ ಒಳಗಾಗದವನಿಗೆ ದೇವರ ಅನ್ಯೋನ್ಯತೆಯಿರುವುದಿಲ್ಲ (2 ಯೋಹಾ. 9:1) ಉಪದೇಶವನ್ನು ಕಣ್ಣುಗುಡ್ಡೆಯಂತೆ ಪಾಲಿಸು (ಜ್ಞಾನೋ. 7:2). ಈ ದಿವಸಗಳು ಕಠಿಣ ದಿವಸಗಳು ಉಪದೇಶದಲ್ಲಿ ನೆಲೆಗೊಳ್ಳದಿದ್ದರೆ ಅನೇಕ ಸುಳ್ಳು ಉಪದೇಶಕರು ವಂಚನೆಗೆ ಒಳಪಡಿಸುವುದು ಹೆಚ್ಚಾಗಿ ಕಾಣಬರುವುದು.

ಕೃಪಾಪೂರ್ಣನಾದ ದೇವರು ಆಶೀರ್ವಾದಿಸಲಿ.

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**

ಬೇತೇಲ್ ಚರ್ಚ್.

---

**ಪ್ರಾರ್ಥನಾ ಮನವಿಗಳು**

* ದೇವರ ಸ್ವರ ಮಾಸ ಪತ್ರಿಕೆಯ ಸೇವೆಗಾಗಿ ಪ್ರಾರ್ಥಿಸಿರಿ.
* ನಮ್ಮ ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಭಯೋತ್ಪಾದನೆ, ವಂಚನೆ, ಮೋಸ, ರಾಜಕೀಯ ಕಲಹಗಳು ನೀಗಿ ದೇಶದಲ್ಲಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸಿರಿ.
* ನಮ್ಮ ರಾಜ್ಯ ಹಾಗೂ ದೇಶದಲ್ಲಿ ನಡೆಯುತ್ತಿರುವ ಅತ್ಯಾಚಾರಗಳು ನಿಂತು ಹೋಗುವಂತೆ ಪ್ರಾರ್ಥಿಸಿರಿ.
* ದೇಶದ ಸುಭದ್ರತೆಗಾಗಿ ಪ್ರಾರ್ಥಿಸೋಣ.
* ರಾಜ್ಯದಲ್ಲಿ ಮತ್ತು ದೇಶದಲ್ಲಿ ಆಳ್ವಿಕೆ ಮಾಡುತ್ತಿರುವ ಅಧಿಕಾರಿಗಳಿಗೆ ದೇವರು ಒಳ್ಳೆಯ ಜ್ಞಾನವನ್ನು ಕೊಟ್ಟು ಉತ್ತಮ ರೀತಿಯಲ್ಲಿ ದೇಶವನ್ನು ನಡೆಸಿಕೊಂಡು ಹೋಗುವಂತೆ ಪ್ರಾರ್ಥಿಸಿರಿ.

---

## ನಮ್ಮೊಂದಿಗೆ ಆಚರಿಸಿ




**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ. (ಎಫೆಸ 2:13)

# ಯೌವನಸ್ಥರ ಸ್ವರ ಸತ್ಯದ ಮೂಲಕ ಬಿಡುಗಡೆ

ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ದೇವರ ಸ್ವರ ಮಾಸ ಪತ್ರಿಕೆಯ ಎಲ್ಲ ಯೌವನಸ್ಥ ಯೌವನಸ್ಥರಿಗೆ ನೂತನ ವರ್ಷರಂಭದಲ್ಲಿ ನನ್ನ ಪ್ರೀತಿಯ ವಂದನೆಗಳನ್ನು ಸಲ್ಲಿಸುತ್ತಾ ಈ ತಿಂಗಳ ಸಂಚಿಕೆಯನ್ನು ಪ್ರಾರಂಭಿಸಲು ಬಯಸುತ್ತೇನೆ.

ಪ್ರಿಯರೇ, ಇದುವರೆಗೂ ನೀವು ಈ ಮಾಸ ಪತ್ರಿಕೆಯ ಮೂಲಕ ಅನೇಕ ವಿಷಯಗಳನ್ನು ಕಲಿಯುತ್ತಾ ಬಂದಿದ್ದೇರೆಂದು ನಾನು ನಂಬುತ್ತೇನೆ ಮತ್ತು ಅದರ ಮೂಲಕ ಪ್ರೋತ್ಸಾಹಿಸಲ್ಪಟ್ಟಿದ್ದೀರೆಂದು ಸಹ ನಾನು ಬಲವಾಗಿ ನಂಬುತ್ತೇನೆ. ಇತ್ತೀಚಿನ ದಿನಗಳಲ್ಲಿ ಯೌವನಸ್ಥರಾದ ನಾವು ಪ್ರತಿ ವರ್ಷವೂ ಒಂದಲ್ಲ ಒಂದು ವಿಧವಾದ ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುತ್ತೇವೆ ಹಾಗೂ ಪ್ರಾರಂಭದಲ್ಲಿ ಬಹಳ ಉತ್ಸುಕರಾಗಿರುತ್ತೇವೆ ಮತ್ತು ದಿನ ಕಳೆದ ಹಾಗೆಲ್ಲಾ ನಾವು ತೆಗೆದುಕೊಂಡ ತೀರ್ಮಾನಗಳಲ್ಲಿ ನಾವು ನಿಲ್ಲುವದಕ್ಕೆ ಸಾಧ್ಯವಾಗದೇ ಹೋದಾಗ ಪ್ರಾರಂಭದಲ್ಲಿದ್ದ ಆ ಉತ್ಸಾಹ ಮತ್ತು ಉತ್ಸುಕತೆ ಕಳೆದುಹೋಗಿ ನಿರಾಸೆಯುಳ್ಳವರಾಗಿ ಮತ್ತದೇ ಹಳೆಯ ಸೋಲುಗಳು ಮತ್ತು ನಿಸ್ಸಹಾಯಕರಾಗಿಬಿಡುತ್ತೇವೆ. ಇದಕ್ಕೆ ಕಾರಣ ಹುಡುಕುತ್ತಾ ಹೋಗುತ್ತಾ ಉತ್ತರವೇ ಸಿಗದೇ ಸೋಲಿನ ಹಾದಿಯಲ್ಲೇ ಸಾಗುತ್ತಿರುತ್ತೇವೆ ಮತ್ತು ಇದು ನನ್ನ ಜೀವಿತಕ್ಕಾಗಿ ದೇವರ ಚಿತ್ತವಿರಬಹುದೇನೋ ಎಂಬುವುದಾಗಿ ನಮ್ಮನ್ನೇ ನಾವು ಸಮಾಧಾನ ಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತೇವೆ. ಇದು ನೀವು ಒಬ್ಬರಾಗಿ ಎದುರಿಸುತ್ತಿದ್ದೀರಿ ಎಂಬುದಾಗಿ ನಾನು ಹೇಳದೇ ಇಂದು ಅನೇಕ ಯೌವನಸ್ಥರು ಇದೇ ರೀತಿಯಾಗಿದ್ದಾರೆಂದು ನಾನು ಬಲವಾಗಿ ಹೇಳಬಲ್ಲೆ. ಅದು ಮಾತ್ರವಲ್ಲದೇ ವೈಯುಕ್ತಿಕವಾಗಿ ನಾನು ಸಹ ಅನೇಕ ಸಲ ಇದೇ ರೀತಿಯಲ್ಲಿ ಅನೇಕ ಬಾರಿ ಇದೇ ಸತ್ಯವೇನೋ ಎಂಬುವುದಾಗಿ ನೆನೆಸಿದೆ, ಆದರೆ ಸತ್ಯ ಅದಲ್ಲ. ಬೈಬಲ್ ಸ್ಪಷ್ಟವಾಗಿ ಯೋಹಾನ 8:32 ರಲ್ಲಿ ಹೀಗೆ ಹೇಳುತ್ತದೆ, **"ಸತ್ಯವನ್ನು ತಿಳಿದುಕೊಳ್ಳುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು"**.

ಈ ಸಂಚಿಕೆ ಕೇವಲ ಒಂದು ಲಿಖಿತರೂಪವಾದ ಸಂದೇಶವಾಗಿರದೇ, ಪ್ರಾಯೋಗಿಕವಾಗಿ ಇಂದು ನಾವು ಹೇಗೆ ಕ್ರಿಯಾರೂಪದಲ್ಲಿ ಮುಂದೆ ಸಾಗಬೇಕೆನ್ನುವದಕ್ಕೆ ಒಂದು ಮಾದರಿಯಾಗಿ ಇರಲಿಕ್ಕಿದೆ ಎಂದು ನಾನು ಭರವಸವುಳ್ಳವನಾಗಿದ್ದೇನೆ.

ಇಂದು ಆ ಸತ್ಯ ಏನಾಗಿದೆ? ಸತ್ಯದ ತಿಳುವಳಿಕೆ ಮಾತ್ರ ಸಾಕೋ ಅಥವಾ ಸತ್ಯ ನಮ್ಮ ಜೀವಿತದಲ್ಲಿ ಪ್ರಕಟವಾಗಬೇಕೋ? ಹೋಶೇಯ 4:6ರಲ್ಲಿ ನೋಡುವಾಗ, **"ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ"** ಎಂದು ಸತ್ಯವೇದ ವಾಕ್ಯವು ಹೇಳುತ್ತದೆ. ಯೇಸು ತಾನು ಶಿಲುಬೆ ಮರಣವನ್ನು ಹೊಂದುವದಕ್ಕೆ ಮೊದಲು ತನ್ನ ಶಿಷ್ಯರ ಸಂಗಡ ಮಾತನಾಡುತ್ತಾ... "ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು. ನೀವು ಮೊದಲಿನಿಂದ ನನ್ನ ಸಂಗಡ ಇದ್ದಕಾರಣ ನೀವೂ ಸಾಕ್ಷಿಗಳಾಗಿದ್ದೀರಿ. ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ. ಅವರು ತಂದೆಯನ್ನಾದರೂ ನನ್ನನ್ನಾದರೂ ತಿಳಿಯದವರಾಗಿರುವದರಿಂದ ಇಂಥದ್ದನ್ನು ನಿಮಗೆ ಮಾಡುವರು. ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದ್ದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ. ನಾನು ನಿಮ್ಮ ಸಂಗಡ ಇದ್ದದರಿಂದ ಮೊದಲು ಇವುಗಳನ್ನು ನಿಮಗೆ ಹೇಳಲಿಲ್ಲ. ಆದರೆ ಈಗ ನಾನು ನನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೋಗುತ್ತೇನೆ. ನೀನು ಎಲ್ಲಿಗೆ ಹೋಗುತ್ತೀ ಎಂದು ನಿಮ್ಮಲ್ಲಿ ಒಬ್ಬನಾದರೂ ನನ್ನನ್ನು ಕೇಳುವುದಿಲ್ಲ; ಆದರೆ ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದರಿಂದ ನಿಮ್ಮ ಹೃದಯವು ದು:ಖದಿಂದ ತುಂಬಿಯದೆ. ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆತನು ಬಂದು ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ

ಹೆಚ್ಚಳ ಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ.
(2 ಕೊರಿಂಥ 10:17)

ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೆ ಇರುವದರಿಂದ ಪಾಪದ ವಿಷಯದಲ್ಲಿಯೂ ನಾನು ತಂದೆಯ ಬಳಿಗೆ ಹೋಗಿ ಇನ್ನು ನಿಮಗೆ ಕಾಣಿಸದೆ ಇರುವುದರಿಂದ ನೀತಿಯ ವಿಷಯದಲ್ಲಿಯೂ ಇಹಲೋಕಾಧಿಪತಿಗೆ ನ್ಯಾಯತೀರ್ವಿಕೆಯಾದದರಿಂದ ನ್ಯಾಯತೀರ್ವಿಕೆಯ ವಿಷಯದಲ್ಲಿಯೂ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೆ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು. ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ; ಅನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅಂದನು. (ಯೋಹಾ 15:26–27, 16:1–16)

ಈ ಮೇಲಿನ ವಾಕ್ಯಗಳನ್ನು ಗಮನಿಸುವುದಾದರೆ ಇಲ್ಲಿ ಯೇಸುಕ್ರಿಸ್ತನು ಒಂದು ಮುಖ್ಯವಾದ ಸತ್ಯವನ್ನು ನಮಗೆಲ್ಲರಿಗೂ ತಿಳಿಸಲು ಬಯಸುತ್ತಾನೆ. ಆ ಸತ್ಯವೇನೆಂದರೆ ಪವಿತ್ರಾತ್ಮನೊಂದಿಗೆ ನಡೆಯುವುದೇ ಆಗಿದೆ. ಪವಿತ್ರಾತ್ಮನೊಂದಿಗೆ ಹೇಗೆ ನಡೆಯುವದನ್ನು ನಾನು ಮುಂದಿನ ಸಂಚಿಕೆಯಲ್ಲಿ ಹಂಚಿಕೊಳ್ಳುತ್ತೇನೆ.

ನಾನು ನಿಮ್ಮ ಸಲಹೆ ಮತ್ತು ಉತ್ತೇಜನವನ್ನು ಎದುರುನೋಡುತ್ತೇನೆ. ನನ್ನೊಂದಿಗೆ ನೀವು ಹಂಚಿಕೊಳ್ಳಲು ಬಯಸುವುದಾದರೆ:

ದೇವರ ಸ್ವರ  ಯೌವನಸ್ಥರ ವಿಭಾಗ, ಬೆತೇಲ್ ರಸ್ತೆ, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115 ವಿಳಸಕ್ಕೆ ಬರೆದು ಕಳುಹಿಸಿ.

ಕರ್ತನು ನಿಮ್ಮನ್ನು ಮುನ್ನಡೆಸಲಿ

**–ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

---

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?

(ರೋಮ 8:31)

ಆರೋಗ್ಯ ಸ್ವರ

# ಚಳಿಗಾಲದ ಚರ್ಮದ ಮಿತ್ರ 'ಕಿವಿ ಫ್ರೂಟ್'

ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಈ ಹಣ್ಣನ್ನು ನೋಡಿರಬಹುದು. ನೋಡಲು ಸ್ವಲ್ಪ ಸಪೋಟ ಹಣ್ಣನ್ನು ಹೋಲುವ ಈ ಹಣ್ಣು ಒಳಭಾಗದಲ್ಲಿ ತಿಳಿಹಸಿರು ಬಣ್ಣವನ್ನು ಹೊಂದಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಹೇರಳವಾಗಿ ಸಿಗುವ ಈ ಹಣ್ಣಿನಲ್ಲಿ ವಿಟಮಿನ್ ಎ ಹಾಗೂ ಬಿ12, ಸಿ ಅಂಶಗಳು ಹೆಚ್ಚಾಗಿ ಇವೆ. ಹಾಗೂ ನೈಸರ್ಗಿಕ ಆ್ಯಸ್ಪಿಂಜಂಟ್ ಅಂಶವೂ ಇದೆ. ಹಾಗಾಗಿ ಮೊಡವೆ, ಎಣ್ಣೆಚರ್ಮ ಹಾಗೂ ಸಣ್ಣ ಸಣ್ಣ ಗುಳ್ಳೆಗಳಿದ್ದವರು ಇದರಿಂದ ಉತ್ತಮ ಚಿಕಿತ್ಸೆ ಪಡೆಯಬಹುದು. ಇದು ಭಾರತದಲ್ಲೂ ಬೇಕಾದಷ್ಟು ಲಭ್ಯ.

* ಮೊಡವೆಗಳಿದ್ದರೆ, ಕಿವಿ ಹಣ್ಣಿನ ರಸದಿಂದ ಮಸಾಜ್ ಮಾಡಿ ನಂತರ ಇದರ ಹಣ್ಣಿನ ತಿರುಳಿನಿಂದ ಪ್ಯಾಕ್ ಹಾಕಿ.
* ಎಣ್ಣೆ ತ್ವಚೆ ಇರುವವರು ಮುಲ್ತಾನಿ ಮಿಟ್ಟಿಗೆ ಇದರ ರಸವನ್ನು ಬೆರೆಸಿ ಪ್ಯಾಕ್ ಹಾಕಿ. 20 ನಿಮಿಷದ ನಂತರ ಸ್ವಚ್ಛಮಾಡಿ.
* ಹಗುರ ರ್‍ಯಾಶಸ್ ಆಗಿದ್ದರೆ ಇದರ ರಸ ಹಾಗೂ ರೋಸ್ ವಾಟರ್ ಬೆರೆಸಿ ಟೋನರಿನಂತೆ ಬಳಸಿ.
* ಮೂಗಿನ ಮೇಲೆ ಬ್ಲ್ಯಾಕ್ ಹೆಡ್ ಇದ್ದರೆ ಇದರ ತಿರುಳಿನಿಂದ ಹಗುರ ಮಸಾಜ್ ಮಾಡಿ.
* ಟ್ಯಾನ್ ಆಗಿದ್ದರೆ ಕಡಲೆ ಹಿಟ್ಟಿಗೆ ಇದರ ರಸವನ್ನು ಬೆರೆಸಿ ಪ್ಯಾಕ್ ಹಾಕಿ.
* ಮೊಣಕೈ ಕಪ್ಪಗಿದ್ದರೆ ಹಾಲಿನ ಕೆನೆ ಹಾಗೂ ಇದರ ತಿರುಳನ್ನು ಬೆರೆಸಿ ನಿಯಮಿತವಾಗಿ ಮಸಾಜ್ ಮಾಡಿ.
* ಕಣ್ಣಿನ ಸುತ್ತಲೂ ಕಪ್ಪು ಕಲೆಗಳಿದ್ದರೆ ಕಿವಿ ಹಣ್ಣಿನ ರಸಕ್ಕೆ ಸ್ವಲ್ಪ ನೀರನ್ನು ಬೆರೆಸಿ ಫ್ರಿಜ್‌ನಲ್ಲಿಟ್ಟು ಹತ್ತಿಯಲ್ಲಿ ಅದ್ದಿ ಕಣ್ಣಿನ ಮೇಲಿಡಿ.

ಹೀಗೆ ಚಳಿಗಾಲದಲ್ಲಿ ಹೇರಳವಾಗಿ ಸಿಗುವ 'ಕಿವಿ' ಹಣ್ಣನ್ನು ಚೆನ್ನಾಗಿ ವರ್ಧಕವಾಗಿಯೂ ಉಪಯೋಗಿಸಿ ನಿಮ್ಮ ಸೌಂದರ್ಯವನ್ನು ಇಮ್ಮಡಿಗೊಳಿಸಿ.

---

**ಗರಿಗರಿ ಚಿಪ್ಸ್** : ಸಂಜೆಯ ಕಾಫಿಗೆ ನಾಲಿಗೆ ಕುರುಕಲು ತಿಂಡಿಯನ್ನು ಬಯಸುವುದು ಸಹಜ. ಅದರಲ್ಲೂ ಈ ಚಳಿಗೆ ಏನಾದರೂ ಗರಿಗರಿಯಾಗಿ ಬಿಸಿಬಿಸಿಯಾಗಿರುವುದನ್ನು ನಾಲಿಗೆ ಬೇಡುತ್ತದೆ. ಅದಕ್ಕಾಗಿ ಇಲ್ಲಿವೆ ನಿಮಗೆ ವಿವಿಧ ಬಗೆಯ ಗರಿಗರಿ ಚಿಪ್ಸ್ ಮಾಡಿ ಸವಿಯಿರಿ.

**ಗೆಣಸಿನ ಚಿಪ್ಸ್** : ಸಾಮಗ್ರಿ : ಸಿಹಿಗೆಣಸು, ಕರಿಯಲು ಎಣ್ಣೆ, ಉಪ್ಪು

**ವಿಧಾನ** : ಗೆಣಸನ್ನು ಚೆನ್ನಾಗಿ ತೊಳೆದು ತೆಳ್ಳಗೆ ಬಿಲ್ಲೆ ಬಿಲ್ಲೆಯಾಗಿ ಕತ್ತರಿಸಿ. ಉಪ್ಪು, ಮೆಣಸಿನಕಾಯಿ ಪುಡಿ, ಇಂಗು ಈ ಮೂರನ್ನು ಬೆರೆಸಿ ಇಟ್ಟುಕೊಳ್ಳಿ. ಅನಂತರ ಕಾದ ಎಣ್ಣೆಗೆ ಕತ್ತರಿಸಿಟ್ಟ ಗೆಣಸನ್ನು ಹಾಕಿ ಕಂದು ಬಣ್ಣ ಬರುವಾಗ ತೆಗೆದು ಬಿಸಿ ಇರುವಾಗಲೇ ಉಪ್ಪು, ಮೆಣಸಿನಪುಡಿಯ ಮಿಶ್ರಣವನ್ನು ಬೆರೆಸಿ. ಆರಿದ ನಂತರ ಗಾಳಿ ಸೋಕದಂತೆ ಡಬ್ಬದಲ್ಲಿ ಹಾಕಿಟ್ಟರೆ 4 ತಿಂಗಳಿಗೆ ಕೆಡವುದಿಲ್ಲ.

**ಬಾಳೆಕಾಯಿ ಚಿಪ್ಸ್** : ಸಾಮಗ್ರಿ : ನೇಂದ್ರ ಬಾಳೆಕಾಯಿ, ಕರಿಯಲು ಎಣ್ಣೆ, ಉಪ್ಪು ನೀರು.

ವಿಧಾನ : ನೇಂದ್ರ ಬಾಳೆಕಾಯಿಯನ್ನು ಸುಲಿದು ಸ್ವಲ್ಪ ಹೊತ್ತು ನೀರಿನಲ್ಲಿ ಹಾಕಿಡಿ. ಆ ಮೇಲೆ ನೀರಿನಿಂದ ತೆಗೆದು ಕಾದ ಎಣ್ಣೆಗೆ ಚಿಪ್ಪಿಂಗ್ ಮಿಶನ್‌ನಲ್ಲಿ ಬೇಗ ಬೇಗನೇ, ತೆಳ್ಳಗೆ ಹೆಚ್ಚಿ ಹಾಕಿ. ಸ್ವಲ್ಪ ಹೊತ್ತು ಮಗುಚುತ್ತಾ ಇದ್ದು ಹಳದಿ ಬಣ್ಣಕ್ಕೆ ಬಂದಾಗ ಉಪ್ಪು ನೀರನ್ನು ಚಿಮುಕಿಸಿ ಸ್ವಲ್ಪ ಹೊತ್ತು ಮಗುಚಿ ತೆಗೆಯಿರಿ.

**ದೀವಿ ಹಲಸಿನ ಚಿಪ್ಸ್** – ಸಾಮಗ್ರಿ : ದೀವಿ ಹಲಸು, ಕರಿಯಲು ಎಣ್ಣೆ, ಉಪ್ಪು ನೀರು.

ವಿಧಾನ : ದೀವಿ ಹಲಸನ್ನು ಸಿಪ್ಪೆ ಮತ್ತು ತಿರುಳು ತೆಗೆದು ತೆಳ್ಳಗೆ ಹೆಚ್ಚಿ ಕಾದ ಎಣ್ಣೆಗೆ ಹಾಕಿ ಕಂದು ಬಣ್ಣ ಬರುವಾಗ ಉಪ್ಪು ನೀರು ಚಿಮುಕಿಸಿ ಮಗುಚಿ ತೆಗೆಯಿರಿ.

**ಹಲಸಿನಕಾಯಿ ಸೊಳೆ ಚಿಪ್ಸ್**

ಸಾಮಗ್ರಿ : ಹಲಸಿನ ಸೊಳೆ, ಕರಿಯಲು ಎಣ್ಣೆ, ಉಪ್ಪು ನೀರು.

ವಿಧಾನ : ಹಲಸಿನಕಾಯಿ ಸೊಳೆಯನ್ನು ಬಿಡಿಸಿ, ತೆಳ್ಳಗೆ ಸೀಳಿ ಕಾದ ಎಣ್ಣೆಗೆ ಹಾಕಿ ಮಗುಚುತ್ತಾ ಇರಿ. ಗರಿಗರಿ ಆಗುವಾಗ ಉಪ್ಪು ನೀರು ಚಿಮುಕಿಸಿ ಮಗುಚಿ ತೆಗೆಯಿರಿ.

– ಸಂಗ್ರಹ.

---

ಕಡೆಯವರಾಗಿರುವ ಕೆಲವರು ಮೊದಲಿನವರಾಗುವರು; ಮೊದಲಿನವರಾಗಿರುವ ಕೆಲವರು ಕಡೆಯವರಾಗುವರು.
(ಲೂಕ 13:30)

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಆ ಸಹೋದರನು ನನ್ನೊಂದಿಗೆ ವಾಗ್ವಾದಕ್ಕೆ ಇಳಿದನು. ನಾನು ಚರ್ಚ್‌ಗೆ ಹೋಗುತ್ತೇನೆ ಎಂದು ಹೇಳಿದನು. ಉಪವಾಸ ಪ್ರಾರ್ಥನೆಯನ್ನು ಮಾಡುತ್ತೇನೆಂದು ಹೇಳಿದನು. ನಾನು ಆತನಿಗೆ ಎಲ್ಲಾ ಸರಿ ನಿನ್ನ ನಡತೆಯನ್ನು ಸ್ವಭಾವವನ್ನು ತಿದ್ದಿಕೊಳ್ಳದಿದ್ದರೆ ನೀನು ಮಾಡುವ ಉಪವಾಸ ಪ್ರಾರ್ಥನೆ ವ್ಯರ್ಥ. ಆತನಲ್ಲಿ ಪಶ್ಚಾತ್ತಾಪ ಉಂಟಾಯಿತು. ಅಕ್ರಮ ಸಂಬಂಧ ಮುರಿದು ಇನ್ನು ಮುಂದೆ ತನ್ನ ಹೆಂಡತಿಯೊಂದಿಗೆ ಪರಿಶುದ್ಧ ಜೀವಿತ ನಡೆಸುತ್ತೇನೆಂದು ತೀರ್ಮಾನ ತೆಗೆದುಕೊಂಡನು. ಕಣ್ಣಿನಲ್ಲಿ ಧಾರಕಾರವಾಗಿ ನೀರು ಹರಿಯಿತು. ತನ್ನ ತಪ್ಪಿಗಾಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಇದು ಕೆಲವೇ ದಿವಸಗಳ ಹಿಂದೆ ನಡೆದ ಘಟನೆಯಾಗಿದೆ. ಇಂದು ತನ್ನ ಕುಟುಂಬ ಜೀವಿತದಲ್ಲಿ ಸಂತೋಷವಾಗಿ ಬಾಳುತ್ತ ಇದ್ದಾನೆ.

**2) ಆತ್ಮೀಕ ಉಪವಾಸ ಪ್ರಾರ್ಥನೆ :–** ಯೆಶಾ. 58:6–7 ಆತ್ಮೀಕ ರೀತಿಯಲ್ಲಿ ಮಾಡುವ ಉಪವಾಸ ಪ್ರಾರ್ಥನೆಯು ದೇವರ ದೃಷ್ಟಿಯಲ್ಲಿ ನಿಜವಾದ ಉಪವಾಸ ಪ್ರಾರ್ಥನೆಯಾಗಿದೆ. **"ನೋಡಿರಿ, ಕೇಡಿನ ಬಂಧಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿಹೋದವರನ್ನು ಬಿಡುಗಡೆಮಾಡುವದು, ನೊಗಗಳನ್ನೆಲ್ಲಾ ಮುರಿಯುವದು, ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖತಪ್ಪಿಸಿಕೊಳ್ಳದಿರುವದು, ಇವುಗಳೇ ನನಗೆ ಇಷ್ಟವಾದ ಉಪವಾಸವ್ರತಲ್ಲವೇ"** (ಯೆಶಾ. 58:6–7).

ನಿಜವಾದ ಆತ್ಮೀಕ ಉಪವಾಸ ಪ್ರಾರ್ಥನೆಯ ನಿಬಂಧನೆಗಳು

1)ಯೆಶಾ. 51:6 ಕೇಡಿನ ಬಂಧನಗಳನ್ನು ಬಿಚ್ಚುವುದು ಅಂದರೆ ನಮ್ಮ ಪಾಪಗಳಿಗಾಗಿ ಮಾನಸಾಂತರಪಡುವುದು. ಹಬ. 1:13 ಹೇಳುತ್ತದೆ, ನಮ್ಮ ದೇವರು ಕೇಡನ್ನು ನೋಡಲಾರದ ಅತಿಪವಿತ್ರದೃಷ್ಟಿಯುಳ್ಳವನು ಮಾತ್ರವಲ್ಲದೆ 1 ಪೇತ್ರ. 1:15 ಪ್ರಕಾರ ನಿಮ್ಮನ್ನು ಕರೆದವನು ಪರಿಶುದ್ಧನಾಗಿರುವ ಪ್ರಕಾರವೇ ನೀವು ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವುದರಿಂದ ನೀವು ಪರಿಶುದ್ಧರಾಗಿರಬೇಕೆಂದು ಬರೆದಿದೆಯಲ್ಲಾ, ನಮ್ಮ ದೇವರು ಪರಿಶುದ್ಧನಾಗಿದ್ದಾನೆ. ಹಾಗೂ ಇಬ್ರಿ. 12:14–15 ಪ್ರಕಾರ ಪರಿಶುದ್ಧತೆಯಿಲ್ಲದೆ ಆತನನ್ನು ನೋಡಲು ಸಾಧ್ಯವಿಲ್ಲ. ಆತನೊಂದಿಗೆ ಸಂಬಂಧ ಇಟ್ಟುಕೊಳ್ಳಬೇಕಾದರೆ, ಆತನ ಜೊತೆಯಲ್ಲಿ ನಡೆಯಬೇಕಾದರೆ ಅದು ಪರಿಶುದ್ಧತೆಯೊಂದಿಗೆ ಮಾತ್ರ ಸಾಧ್ಯ. ನಮ್ಮ ಒಳಗಡೆ ಪಾಪವನ್ನು ಇಟ್ಟುಕೊಂಡು ಮಾಡುವಂತಹ ಉಪವಾಸ ಪ್ರಾರ್ಥನೆಗಳು ಹಾಗೂ ಆತ್ಮೀಕ ಅಭ್ಯಾಸಗಳು ದೇವರು ನಮಗೆ ಉತ್ತರಿಸಲಾರದಂತೆ ಮಾಡುತ್ತದೆ. ಯೋವೇ. 2:12–13 ವಚನ ಈ ರೀತಿ ಹೇಳುತ್ತದೆ, **"ಈಗಲಾದರೋ ನೀವು ಮನ:ಪೂರ್ವಕವಾಗಿ ನನ್ನ ಕಡೆಗೆ ತಿರುಗಿಕೊಂಡು ಉಪವಾಸಮಾಡಿರಿ, ಅಳಿರಿ, ಗೋಳಾಡಿರಿ; ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ."** ಆದಕಾರಣ ಪ್ರಿಯರೇ, ಪಾಪಿ ಪಶ್ಚಾತ್ತಾಪ ಇಲ್ಲದೆ ಮಾಡುವಂತಹ ಉಪವಾಸ ಪ್ರಾರ್ಥನೆಯು ದೇವರ ಮೆಚ್ಚುಗೆಯನ್ನು ಪಡೆಯುವಂತದ್ದು ಅಲ್ಲ. ಹಳೆಒಡಂಬಡಿಕೆ ಯೋನನ ಪುಸಕ್ತದಲ್ಲಿ ದೇವರು ಯೋನನಿಗೆ ನಿನವೆಯ ಜನರ ಪಾಪದ ನಿಮಿತ್ತವಾಗಿ 40 ದಿವಸಗಳಲ್ಲಿ ನಿನವೆಯನ್ನು ನಾಶಮಾಡುವಂತಹ ಎಚ್ಚರಿಕೆಯನ್ನು ಪ್ರವಾದಿಯಾದ ಯೋನನ ಮೂಲಕ ಜನರಿಗೆ ಎಚ್ಚರಿಕೆಕೊಟ್ಟನು. ಇದರಲ್ಲಿ ದೇವರ ಉದ್ದೇಶ ಏನೆಂದರೆ ಯೋನನ ಪ್ರಸಂಗವನ್ನು ಜನರು ಕೇಳಿ ಮಾನಸಾಂತರಪಟ್ಟು ಬರಲಿಕ್ಕಿರುವ ನಾಶನದಿಂದ ತಪ್ಪಿಸಿಕೊಳ್ಳಬೇಕೆಂಬುದಾಗಿತು. ಯೋನನು ಸತತವಾಗಿ ಆ ಪಟ್ಟಣಕ್ಕೆ ಮಾನಸಾಂತರ ಸಂದೇಶವನ್ನು ಸಾರಿದನು. ಆಗ ಅಲ್ಲಿಯ ಜನರು ಮಾನಸಾಂತರಪಟ್ಟು ದೇವರ ಕಡೆಗೆ ತಿರುಗಿಕೊಂಡು ಉಪವಾಸ ಪ್ರಾರ್ಥನೆಮಾಡಿ ಗೋಣಿತೊಟ್ಟನ್ನುಟ್ಟುಕೊಂಡಾಗ ದೇವರು ಮನಮರುಗಿ ನಿನವೆಯ ನಾಶನದ ಕುರಿತಾಗಿರುವ ತನ್ನ ನಿರ್ಧಾರವನ್ನು ಬದಲಾಯಿಸಿದನು. ಯೋನ. 3:1–10 ಅನಂತರ ಯೆಹೋವನು ಯೋನನಿಗೆ ನೀನೆದ್ದು ಆ ದೊಡ್ಡ ಪಟ್ಟಣವಾದ ನಿನವೆಗೆ ಹೋಗಿ ನಾನು ನಿನಗೆ ಪ್ರಕಟಿಸುವುದನ್ನು ಅಲ್ಲಿ

ಜ್ಞಾನಿಗಳ ಜ್ಞಾನವು, ವಿವೇಕಿಗಳ ವಿವೇಕವು ಆತನ ವರವೇ.
(ದಾನಿ. 2:21)

ಸಾರು ಎಂದು ಎರಡನೆಯ ಸಲ ಅಪ್ಪಣೆಮಾಡಿದನು. ಆಗ ಯೋನನು ಎದ್ದು ಯೆಹೋವನ ಅಪ್ಪಣೆಯಂತೆ ನಿನವೆಗೆ ಹೋದನು. ನಿನವೆಯ ಮೂರು ದಿನದ ಪ್ರಯಾಣದಷ್ಟು ಅತಿ ವಿಸ್ತಾರವಾದ ಮಹಾ ಪಟ್ಟಣವಾಗಿತ್ತು. ಯೋನನು ಪಟ್ಟಣದಲ್ಲಿ ಸೇರಿ ಮೊದಲು ಒಂದು ದಿವಸದ ಪ್ರಯಾಣದಷ್ಟು ದೂರ ನಡೆದು ನಾಲ್ವತ್ತು ದಿನಗಳಾದ ಮೇಲೆ ನಿನವೆಯು ಕೆಡವಲ್ಪಡುವುದು ಎಂದು ಸಾರ ತೊಡಗಿದನು. ಇದನ್ನು ಕೇಳಿ ನಿನವೆಯವರು ದೇವರಲ್ಲಿ ನಂಬಿಕೆಯಿಟ್ಟು ಉಪವಾಸವನ್ನು ಗೊತ್ತುಮಾಡಿ ಸಾರಿದರು. ದೊಡ್ಡವರು ಮೊದಲುಗೊಂಡು ಚಿಕ್ಕವರ ತನಕ ಎಲ್ಲರೂ ಗೋಣಿತಟ್ಟನ್ನು ಸುತ್ತಿಕೊಂಡರು. ಯೋನನ ಪ್ರಕಟನೆಯು ನಿನವೆಯ ಅರಸನಿಗೆ ಮುಟ್ಟಲು ಅವನು ಸಿಂಹಾಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆದುಬಿಟ್ಟು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತನು. ಇದಲ್ಲದೆ ಅವನು ತನ್ನ ಮತ್ತು ರಾಜ್ಯಧಿಕಾರಿಗಳ ಆಜ್ಞೆಯಾಗಿ ಜನ, ಪಶು, ಮಂದೆ, ಹಿಂಡು ಇವುಗಳು ಏನೂ ಕೂಡಾ ನೋಡದಿರಲಿ, ತಿನ್ನದಿರಲಿ, ಕುಡಿಯದಿರಲಿ. ಜನರಿಗೂ, ಪಶುಗಳಿಗೂ ಗೋಣಿತಟ್ಟು ಹೊದಿಕೆಯಾಗಿರಲಿ. ಎಲ್ಲರೂ ದೇವರಿಗೆ ಬಲವಾಗಿ ಮೊರೆಯಿಡಲಿ. ಒಬ್ಬೊಬ್ಬನು ತನ್ನ ತನ್ನ ದುರ್ಮಾಗವನ್ನು ತಾನು ನಡೆಸುತ್ತಿದ್ದ ಹಿಂಸೆಯನ್ನು ತೊರೆದುಬಿಡಲಿ. ದೇವರು ಒಂದು ವೇಳೆ ಮನಮರುಗಿ ಹಿಂದಿರುಗಿ ತನ್ನ ಉಗ್ರಕೋಪವನ್ನು ತೊಲಗಿಸನು. ನಾವು ನಾಶವಾಗದೆ ಉಳಿದೆವು ಎಂಬುದನ್ನು ನಿನವೆಯಲ್ಲೆಲ್ಲಾ ಸಾರಿದನು. ದೇವರು ನಿನವೆಯವರ ಕಾರ್ಯಗಳನ್ನು ನೋಡಿ ಅವರು ತಮ್ಮ ದುರ್ಮಾಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ ಅವರಿಗೆ ಮಾಡುವೆನು ಎಂದು ಪ್ರಕಟಿಸಿದ ಕೇಡನ್ನು ಮಾಡದೆ ಬಿಟ್ಟನು. ಇಲ್ಲಿ ದೇವರು ಮಾನಸಾಂತರಪಟ್ಟು ಉಪವಾಸ ಪ್ರಾರ್ಥನೆಮಾಡಿದ ನಿನವೆಯ ಜನರನ್ನು ಹೀಗೆ ಕರುಣಿಸಿದನು.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

## ಸ್ವಸ್ಥತೆ ಹಾಗೂ ಬಿಡುಗಡೆಯ ಕೂಟಗಳು

ಫೆಬ್ರವರಿ 11 ರಿಂದ 16ರ ವರೆಗೆ ಡಿಜಿಎಂ ಬೇತೆಲ್ ಚರ್ಚ್ ಯೇಸುಪುರ ಶಂಕರಪುರ ಸಭೆಯಲ್ಲಿ ವಿಶೇಷ ಸ್ವಸ್ಥತೆ ಹಾಗೂ ಬಿಡುಗಡೆ ಕೂಟವನ್ನು ಏರ್ಪಡಿಸಲಾಗಿದೆ. ದೇಶ ವಿದೇಶಗಳಲ್ಲಿ ದೇವರಿಂದ ಬಲವಾಗಿ ಉಪಯೋಗಿಸಲ್ಪಡುತ್ತಿರುವ ದೇವ ಸೇವಕರುಗಳು ಬಂದು ಸೇವೆ ಮಾಡಲಿರುವರು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:**
**9902334941, 974070654, 9844265602**

**********

2013 ಮೇ 20-25ರ ವರೆಗೆ 6 ದಿವಸದ **ಸ್ಕೂಲ್ ಆಫ್ ವರ್‌ಶಿಪ್** ಡಿಜಿಎಂ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಸಲ್ಪಡುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ಶೀಘ್ರವಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಇದನ್ನು ನಡೆಸಿಕೊಡುವವರು ಪಾ॥ ಜಯಶೀಲನ್ ಹಾಗೂ ತಂಡದವರು. (11 x 24 ದಿವಸ ನಿರಂತರ ಆರಾಧನೆ ಮಾಡಿ ಗಿನ್ನಿಸಿ ದಾಖಲೆಗೊಂಡ ಸೇವಕರು).

ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು.
(ಯೆಹೆ. 37:14)



# ಸ್ಥಳೀಯ ಮತ್ತು ವಿದೇಶ ಸುದ್ದಿ

- ಐಎಸ್ಐ ನಕ್ಸಲ್ ನಂಟು ಬಯಲು: ಗಡಿಯಾಚೆಯಿಂದಲೇ ಭಾರತಕ್ಕೆ ಕಿರುಕುಳ ಕೊಡುತ್ತಿರುವ ಪಾಕಿಸ್ತಾನ ಭಾರತದ ಆಂತರಿಕ ಭದ್ರತೆಗೇ ಕನ್ನಕೊರೆಯುತ್ತಿರುವ ಗುಮಾನಿಗೆ ಸ್ಪಷ್ಟ ಸಾಕ್ಷ್ಯಾಧಾರ ಸಿಕ್ಕಿದೆ. ನಕ್ಸಲ್ ದಾಳಿಯಲ್ಲಿ ಮೃತಪಟ್ಟ ಜಾರ್ಖಂಡ್ ಯೋಧನ ಶವದಲ್ಲಿ ಪತ್ತೆಯಾದ ಸ್ಫೋಟಕ ಪಾಕಿಸ್ತಾನದ್ದೆಂಬುದು ಸಾಬೀತಾಗಿದೆ.
- ಶೀಘ್ರ ಇಸ್ಲಾಮಿಕ್ ಬ್ಯಾಂಕಿಂಗ್ : ಪ್ರಸಕ್ತ ವರ್ಷ ನಡೆಯಲಿರುವ 9 ರಾಜ್ಯಗಳ ವಿಧಾನಸಭೆ ಚುನಾವಣೆ ಮತ್ತು ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ಸರ್ಕಾರ ಮುಸ್ಲಿಂ ಮತಗಳ ಓಲೈಕೆಗೆ ಕಸರತ್ತು ನಡೆಸಿದೆ. ಇದಕ್ಕಾಗಿ ಶೀಘ್ರವೇ ಇಸ್ಲಾಮಿಕ್ ಬ್ಯಾಂಕಿಂಗ್ ವ್ಯವಸ್ಥೆ ಆರಂಭಿಸಲು ಸಿದ್ಧತೆ ನಡೆಸಿದೆ.
- ಅಪ್ರಾಪ್ತರಿಗೆ 'ಸಬಲ ಸಾಂತ್ವನ' ಲೈಂಗಿಕ ದೌರ್ಜನ್ಯಕ್ಕೆ ತುತ್ತಾದ ಅಪ್ರಾಪ್ತ ವಯಸ್ಸಿನ ಬಾಲಕಿಯರಿಗೆ ಸಾಂತ್ವನ ಹೇಳಿ, ಅತ್ಯಾಚಾರಿಗಳಿಗೆ ಶಿಕ್ಷೆ ಕೊಡಿಸುವ ಪ್ರಾಯೋಗಿಕ ಕಾರ್ಯಕ್ರಮ ರಾಜ್ಯದ ಆರು ಜಿಲ್ಲೆಗಳಿಗೆ ವಿಸ್ತರಣೆಯಾಗಲಿದೆ.
- ಐಸ್‌ಕ್ರೀಮ್ ಈಗ ಇಂಧನವಾಗಿ ಬದಲಾಗುತ್ತೆ ! ಐಸ್‌ಕ್ರೀಮ್, ಸೋಪು ಹಾಗೂ ಶಾಂಪೂಗಳಲ್ಲಿ ಹೈಡ್ರೋಕಾರ್ಬನ್ ರಾಸಾಯನಿಕವನ್ನು ನಿರ್ವಹಿಸುವಂತಹ ಜೈವಿಕ ಪರಿವರ್ತಕಗಳನ್ನು ವಿಜ್ಞಾನಿಗಳು ಪತ್ತೆಮಾಡಿದ್ದಾರೆ. ಈ ಮಹತ್ವದ ಸಂಶೋಧನೆಯಿಂದ ಇಂಧನ ಕ್ಷೇತ್ರಕ್ಕೆ ಉಪಯೋಗವಾಗುವ ನಿರೀಕ್ಷೆ ಇದೆ.
- ಡೀಸೆಲ್, ಸೀಮೆಎಣ್ಣೆ, ಗ್ಯಾಸ್ ಶೀಘ್ರಬೆಲೆ ಏರಿಕೆ ? ವಿತ್ತೀಯ ಕೊರತೆಯನ್ನು ಕಡಿಮೆಗೊಳಿಸಿಕೊಳ್ಳಲು ಸಲಹೆಗಳನ್ನು ಮಾಡಿರುವ ವಿಜಯ್ ಕೇಳ್ಕರ್ ಸಮಿತಿಯ ವರದಿಯನ್ನು ಅಂಗೀಕರಿಸುವ ಒಲವನ್ನು ಸರಕಾರ ಹೊಂದಿರುವುದರಿಂದ ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲ ಬೆಲೆ ಸದ್ಯವೇ ಏರುವ ಸಾಧ್ಯತೆಯಿದೆ.
- ಚೀನ : ತಾಪಮಾನ ತೀವ್ರ ಕುಸಿತ; ಹೆಪ್ಪುಗಟ್ಟಿದ ಕಡಲು ಚೀನದಲ್ಲಿ ತಾಪಮಾನ ಹಿಂದಿನ 28 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಕಡಲ ನೀರಿನ ಮೇಲ್ಮೈ ಕೂಡ ಹೆಪ್ಪುಗಟ್ಟಿದ್ದು, ಸುಮಾರು 1,000 ನೌಕೆಗಳು ಹಿಮದಲ್ಲಿ ಸಿಲುಕಿಕೊಂಡಿವೆ.
- ಅಲಾಸ್ಕಾ ಕರಾವಳಿಯಲ್ಲಿ ಭೂಕಂಪ : ಸುನಾಮಿ ಎಚ್ಚರಿಕೆ :– ಅಲಾಸ್ಕಾ ಕರಾವಳಿಯಾಚೆ ಶಾಂತ ಮಹಾಸಾಗರದಲ್ಲಿ 7.7 ತೀವ್ರತೆಯ ಭೂಕಂಪ ಸಂಭವಿಸಿದೆ. ವಿನಾಶಕಾರಿ ಸುನಾಮಿ ಏಳುವ ಸಂಭವವಿದೆ ಎಂದು ಅಮೆರಿಕ ಸರಕಾರ ತಿಳಿಸಿದೆ.
- ಟ್ಯೂನಾ ಮೀನು ದಾಖಲೆ ಬೆಲೆಗೆ ಮಾರಾಟ : ಜಪಾನಿನ ಸುಕಿಜಿ ಮೀನು ಮಾರುಕಟ್ಟೆಯಲ್ಲಿ ವರ್ಷದ ಪ್ರಥಮ ಹರಾಜಿನಲ್ಲಿ ದೈತ್ಯ ಗಾತ್ರದ ಟ್ಯೂನಾ ಮೀನು 18 ಲಕ್ಷ ಡಾಲರ್‌ಗೆ ಮಾರಾಟವಾಗಿದೆ. ಇದು ಕಳೆದ ವರ್ಷದ ಗರಿಷ್ಠ ಬೆಲೆಗಿಂತ ಮೂರುಪಟ್ಟು ಹೆಚ್ಚಾಗಿದೆ.

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಯೆಹೋವನ ರಕ್ಷಣಕಾರ್ಯವನ್ನು ಎದುರುನೋಡುತ್ತಾ ಶಾಂತವಾಗಿ ಕಾದುಕೊಂಡಿರುವದು ಒಳ್ಳೇದು.
(ಪ್ರಲಾ. 3:26)

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

# ತಿಳುವಳಿಕೆಯ ಸ್ವರ

## ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಸಾಂಪ್ರದಾಯಕ :– ಎಸ್ತೇರ್, ಸುಸನ್ನ, ಮೂರು ಪರಿಶುದ್ಧ ಕುಮಾರರ ಗೀತೆಗಳು, ಬೆಲ್ ಮತ್ತು ಮಹಾಸರ್ಪ, ಜುಡಿತ್ ಮತ್ತು ತೊಬಿತ್ ಇವುಗಳಿಗೆ ಸೇರ್ಪಡೆ. ಪ್ರವಾದನಾ ಗ್ರಂಥಗಳು : ಬಾರೂಕ ಮತ್ತು ಮನಸ್ಸೆಯ ಪ್ರಾರ್ಥನೆಗಳು.

ಭವಿಷ್ಯ ದರ್ಶನ : ಲಾತೀನ್ ಭಾಷೆಯ ವಲ್ಗೇಟಿನಲ್ಲಿರುವ ಎರಡನೇ ಮತ್ತು ನಾಲ್ಕನೇ ಎಸ್ದ್ರಾಸ್

ಭೋಧಪ್ರದ : ಪ್ರಸಂಗಿ ಮತ್ತು ಸೊಲೊಮೋನನ ಜ್ಞಾನ (ಜ್ಞಾನೋಕ್ತಿಯಂತೆ)

**ದೇವರು ಮಾಡಿದ ಒಡಂಬಡಿಕೆಗಳು :–**

* **ಏದೆನಿನ ಒಡಂಬಡಿಕೆ :** ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ : ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ, ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ (ಆದಿ. 1:28).
* **ಆದಾಮನೊಂದಿಗೆ ಒಡಂಬಡಿಕೆ :** ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ. (ಆದಿ. 3:15).
* **ನೋಹನನೊಂದಿಗೆ ಒಡಂಬಡಿಕೆ:** ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ. ಭೂಮಿಯ ಮೇಲಿರುವ ಎಲ್ಲಾ ಮೃಗಗಳೂ, ಆಕಾಶದ ಎಲ್ಲಾ ಪಕ್ಷಿಗಳೂ, ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗಳೂ ಸಮುದ್ರದ ಮೀನುಗಳೂ ನಿಮಗೆ ಬೆದರಿ ಅಂಜಿಕೊಳ್ಳುವೆವು. ನಾನು ಅವುಗಳನ್ನೆಲ್ಲಾ ನಿಮ್ಮ ಸ್ವಾಧೀನಕ್ಕೆ ಕೊಟ್ಟಿದ್ದೇನೆ. ಭೂಮಿಯ ಮೇಲೆ ತಿರುಗುವ ಎಲ್ಲಾ ಜೀವ ಜಂತುಗಳೂ ನಿಮಗೆ ಆಹಾರವಾಗಿರುವವು. ನಾನು ನಿಮ್ಮ ಆಹಾರಕ್ಕೆ ಪೈರುಗಳನ್ನು ಕೊಟ್ಟಂತೆ ಇವುಗಳನ್ನೂ ಕೊಟ್ಟಿದ್ದೇನೆ. ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು; ರಕ್ತವು ಜೀವವಷ್ಟೆ (ಆದಿ. 9:1–4).
* **ಅಬ್ರಾಮನೊಂದಿಗೆ ಒಡಂಬಡಿಕೆ:** ಐಗುಪ್ತದೇಶದ ನದಿಯಿಂದ ಯೂಫೇಟೀಸ್ ಮಹಾನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ (ಆದಿ. 15:18).
* **ಮೋಶೆಯೊಂದಿಗೆ ಒಡಂಬಡಿಕೆ :** ಮೋಶೆ ಜನರ ಬಳಿಗೆ ಇಳಿದು ಹೋಗಿ (ಆ ಮಾತುಗಳನ್ನು ವಿಮೋ. 20:1–26).
* **ಪಾಲೆಸ್ತೀನದ ಒಡಂಬಡಿಕೆ :** ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಚದರಿಸಿರುವ ದೇಶಗಳಲ್ಲಿ ನೀವು ಇವುಗಳನ್ನು ನೆನಪಿಗೆ ತಂದುಕೊಂಡು ನಿಮ್ಮ ಮಕ್ಕಳು ಸಹಿತವಾಗಿ ನಿಮ್ಮ ದೇವರಾದ ಯೆಹೋವನ ಆಶ್ರಯಕ್ಕೆ ತಿರುಗಿ ಬಂದು ನಾನು ಈಗ ನಿಮಗೆ ಬೋಧಿಸುವ ಆತನ ಮಾತುಗಳಿಗೆ ಸಂಪೂರ್ಣವಾದ ಹೃದಯದಿಂದಲೂ, ಮನಸ್ಸಿನಿಂದಲೂ ವಿಧೇಯರಾದರೆ ನಿಮ್ಮ ದೇವರಾದ ಯೆಹೋವನು ದುರವಸ್ಥೆಯಿಂದ ನಿಮ್ಮನ್ನು ತಪ್ಪಿಸಿ ನಿಮ್ಮನ್ನು ಕನಿಕರಿಸಿ ತಾನು ನಿಮ್ಮನ್ನು ಚದರಿಸಿರುವ ಎಲ್ಲಾ ದೇಶಗಳಿಂದ ತಿರುಗಿ ಕೂಡಿಸುವನು (ಧರ್ಮೋ. 30:1–3).
* **ದಾವೀದನೊಂದಿಗೆ ಒಡಂಬಡಿಕೆ :** ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತವಾಗಿರುವುದು (2 ಸಮು. 7:16).
* **ಹೊಸ ಒಡಂಬಡಿಕೆ :** ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ, ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ಎಂದು ಕರ್ತನು ಹೇಳುತ್ತಾನೆ.

ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈ ಹಿಡಿದು ಐಗುಪ್ತದೇಶದೊಳಗಿಂದ ಕರಕೊಂಡು ಬಂದ ಕಾಲದಲ್ಲಿ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲವಾದದರಿಂದ ನಾನು ಅವರ ಚಿಂತೆಯನ್ನು ಬಿಟ್ಟೆನೆಂದು ಕರ್ತನು ಹೇಳುತ್ತಾನೆ. ಆ ದಿನಗಳು ಬಂದ ಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು.

ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು, ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ಒಂದೇ ಊರಿನವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸಬೇಕಾಗಿರುವುದಿಲ್ಲ;

ನಾನು (ಯೇಸು) ಸಮೀಪದಲ್ಲಿ ಮಾತ್ರ ಇರುವ ದೇವರೋ? ದೂರದಲ್ಲಿಯೂ ಇರುವವನಲ್ಲವೋ?
(ಯೆರೆ. 23:23)

ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು. ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು, ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ (ಇಬ್ರಿ. 8:8–12).

**ಹಳೇ ಮತ್ತು ಹೊಸ ಒಡಂಬಡಿಕೆಯ ಮಧ್ಯಂತರ ಕಾಲದ ಚರಿತ್ರೆ :** ಸತ್ಯವೇದದ ಅಭ್ಯಾಸಿಗಳು ಈ ಮಧ್ಯಂತರ ಕಾಲವನ್ನು ಮೌನ ಶತಮಾನಗಳೆಂದು ವರ್ಣಿಸಿರುವರು. ಯಾಕಂದರೆ ಈ ಸಮಯದಲ್ಲಿ ದೇವರು ಯಾರೊಂದಿಗೂ ಯಾವ ವಿಧದಲ್ಲೂ ಮಾತಾಡಿರುವುದಿಲ್ಲ.

ಯೇಸುಕ್ರಿಸ್ತನ ಬರೋಣ ಮತ್ತು ಜನನದ ವಿಷಯವಾಗಿ ಕಾಲ ಸಮಯಗಳು ಪ್ರಕಟಿಸುತ್ತಿದ್ದವು ಎಂಬ ತಿಳುವಳಿಕೆಯು ಇತ್ತು. ಯೆಹೂದ್ಯರು ಸೆರೆಯಿಂದ ಬಿಡುಗಡೆಯಾದ ನೂರು ವರುಷಗಳ ತರುವಾಯ ಸುಮಾರು ಕ್ರಿ.ಪೂ. 450ರಲ್ಲಿ ಹಳೇ ಒಡಂಬಡಿಕೆಯ ಕೊನೆಯ ಪುಸ್ತಕವಾದ ಮಲಾಕಿಯನ ಪುಸ್ತಕದಲ್ಲಿ ಅಂತ್ಯವಾಯಿತು. ಈ ಸಮಯದಲ್ಲಿ ಯೂದಾಯವನ್ನು ಪಾರಸೀಯರು ಆಳುತ್ತಿದ್ದರು. ಇವರು ಸುಮಾರು ಇನ್ನೂರು ವರ್ಷಗಳವರೆಗೆ ಆಳಿದರು.

**ಗ್ರೀಕರ ಆಡಳಿತ :**

ಮಹಾ ಅಲೆಗ್ಸಾಂಡರನು (ದಾನಿ. 8:3–7) ಪಾರಸೀಯ ದೇಶದ ದಾರ್ಯಾವೆಷನನ್ನು ಕ್ರಿ.ಪೂ. 331 ರಲ್ಲಿ ಗೆದ್ದನು (ನೆಹೆ. 12:22). ಹೆಚ್ಚು ಕಡಿಮೆ 150 ವರ್ಷಗಳವರೆಗೆ ಯೂದಾಯವು ಗ್ರೀಕ್ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು. ಇವನ ಕಾಲದಲ್ಲಿ ಗ್ರೀಕ್ ಭಾಷೆಯನ್ನು ಗ್ರೀಕರ ಆಚಾರ ಪದ್ಧತಿಗಳನ್ನು ಹಳೇ ಸಾಮ್ರಾಜ್ಯದಲ್ಲಿ ಆಚರಣೆಗೆ ತಂದನು.

ಅಲೆಗ್ಸಾಂಡರನ ಮರಣಾನಂತರ ಗ್ರೀಕ್ ರಾಜ್ಯವು ಒಡೆದುಹೋಯಿತು. ಇದರ ಪರಿಣಾಮವಾಗಿ ಐಗುಪ್ತದೇಶದ ಪ್ಟೊಲೆ ಮಾಯರಿಗೂ, ಸಿರಿಯಾ ದೇಶದ ಅಧಿಪತಿಗೂ ಕಾದಾಟ ಉಂಟಾಯಿತು. ಇದರಿಂದ ಐಗುಪ್ತ ದೇಶವು ಯೂದಾಯದವರಿಂದ ಆಳಲ್ಪಟ್ಟು ನಂತರ ಸಿರಿಯಾ ದೇಶವು ಇವರ ಆಳ್ವಿಕೆಗೆ ಒಳಪಟ್ಟಿತು.

ಹಳೇ ಒಡಂಬಡಿಕೆ ಕಾಲದ ಅಂತ್ಯ ಕ್ರಿಸ್ತನೆನಸಿಕೊಳ್ಳುವವನು ಯೆಹೂದ್ಯರ ಹಿಂಸಕನೂ ಸಿರಿಯಾದ ಅರಸನೂ ಆದ ಅಂತಿಯೋಕ್ಯದ ಎಫಫೆನ್ಸ್ ಎಂಬಾತನ ಕಾಲದಲ್ಲಿ ದೇವಾಲಯದ ಯಜ್ಞವೇದಿಯಲ್ಲಿ ಹಂದಿಮಾಂಸವನ್ನು ಯಜ್ಞಮಾಡಿ ದೇವಾಲಯವನ್ನು ಮತ್ತು ಯಜ್ಞವೇದಿಯನ್ನು ಕ್ರಿ.ಪೂ. 168ರಲ್ಲಿ ಅಶುದ್ಧಗೊಳಿಸಿದನು. ಮಾತ್ರವಲ್ಲದೆ ಯೆಹೂದ್ಯರಿಗೆ ವಿರೋಧವಾಗಿ ಯೆರೂಸಲೇಮಿನಲ್ಲಿ ವಿಗ್ರಹಾರಾಧನೆಯನ್ನು ಆರಂಭಿಸಿ ದೇವಾಲಯವನ್ನು ಅಶುದ್ಧಗೊಳಿಸಿದನು. ಈ ಸಮಯವು ಯೆಹೂದ್ಯರಿಗೆ "ಕಾರ್ಗತ್ತಲಿನ ವರುಷ"ಗಳಾಗಿ ಪರಿಣಮಿಸಿದವು. ಈ ಅಸಹ್ಯ ಕಾರ್ಯಗಳಲ್ಲಿ ಮನನೊಂದ ಯೆಹೂದ್ಯರು ಯೂದ ಮಕಬಸನ ಮುಂದಾಳತ್ವದಲ್ಲಿ ದಂಗೆಯೆದ್ದು ಅನೇಕ ಮೇಲ್ತರದ ಶಕ್ತಿಗಳ ವಿರುದ್ಧ ಹೋರಾಡಿ ಗೆದ್ದು ಕ್ರಿ.ಪೂ. 166 ರಲ್ಲಿ ಯೆರೂಸಲೇಮನ್ನು ಪುನ: ಸ್ವಾಧೀನ ಪಡಿಸಿಕೊಂಡರು.

**ಮಕಬೀಯರ ಸಮಯ :**

ರೋಮನ್ನರು ಪೊಂಪೆಯ ಮುಂದಾಳತ್ವದಲ್ಲಿ ಪ್ಯಾಲೆಸ್ತೀನ ದೇಶವನ್ನು ಕ್ರಿ.ಪೂ. 63ರಲ್ಲಿ ಸ್ವಾಧೀನಪಡಿಸಿಕೊಳ್ಳುವವರೆಗೆ ಯೆಹೂದ್ಯರ ದಂಗೆಯ ಪರಿಣಾಮವಾಗಿ ಹೆಚ್ಚು ಕಡಿಮೆ 100 ವರುಷಗಳವರೆಗೆ ಯೂದಾಯವು ಸ್ವತಂತ್ರವಾಗಿತ್ತು.

**ರೋಮಾಯರ ಅಧಿಕಾರ :**

ಹೆಚ್ಚುಕಡಿಮೆ 60 ವರ್ಷಗಳ ಕಾಲ ಮಧ್ಯಂತರರ ಸಮಯ (ನಾನೂರು ವರ್ಷಗಳ ನಂತರ) ಯೂದಾಯವು ರೋಮನ್ನರ ಆಡಳಿತಾಧಿಕಾರದಲ್ಲಿತ್ತು (ಲೂಕ. 3:1). ಹಳೇ ಮತ್ತು ಹೊಸ ಒಡಂಬಡಿಕೆಗಳ ತಾರತಮ್ಯ ನಾನೂರು ವರ್ಷಗಳ ಮೌನಕಾಲ (ಕ್ರಿಸ್ತನು)

**ಹಳೇ ಒಡಂಬಡಿಕೆ :**

* ಹೆಬ್ಬಯಕೆ :– ಆಹಾ, ಕರ್ತನ ದರ್ಶನವು ಎಲ್ಲಿ ಆದೀತು, ನನಗೆ ಗೊತ್ತಾಗಿದ್ದರೆ ಎಷ್ಟೋ ಸಂತೋಷ! ಆತನ ಸನ್ನಿಧಿಯನ್ನು ಸೇರುವೆನು (ಯೋಬ. 23:3).
* ನಿರ್ಮಾಪಕ :– ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು (ಆದಿ. 1:1).
* ಮಹಿಮೆಯುಳ್ಳ ದೇವರು :– ಯೆಹೋವನು ಬೆಂಕಿಯೊಳಗೆ ಸೀನಾಯಿ ಬೆಟ್ಟದ ಮೇಲಕ್ಕೆ ಇಳಿದು ಬಂದದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು (ವಿಮೋ. 19:18).
* ಮೊದಲಿನ ಸೃಷ್ಟಿ :– ಆಕಾಶ ಭೂಮಿ (ಆದಿ. 1:1).
* ಆತ್ಮೀಕ ಅಂಧಕಾರ :– ಇವರು ಬುದ್ಧಿಹೀನರೂ ವಿವೇಕಶೂನ್ಯರೂ ಆಗಿ ಅಂಧಕಾರದಲ್ಲಿ ಅಲೆಯುತ್ತಾರೆ (ಕೀರ್ತ. 82:5).
* ಸೈತಾನನಿಗೆ ಗೆಲುವು :– ಆಗ ಸ್ತ್ರೀಯು ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ, ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ

ನಾನೇ, ನಾನೇ ಯೆಹೋವನು; ನಾನು ಹೊರತು ಯಾವ ರಕ್ಷಕನೂ ಇಲ್ಲ.
(ಯೆಶಾ. 43:11)

ಇದೆ ಎಂದು ತಿಳಿದು ಅದನ್ನು ತಕ್ಕೊಂಡು ತಿಂದಳು (ಆದಿ. 3:6).

* ಪಾಪದ ಶಾಪ :– ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳುಗಿಡಗಳೂ, ಕಳೆಗಳು ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ ನೀನು ತಿರುಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ, ನೀನು ಮಣ್ಣೆ; ಪುನ: ಮಣ್ಣಿಗೆ ಸೇರತಕ್ಕವನಾಗಿದ್ದೀ (ಆದಿ. 17:19).
* ಮರಣದ ಆಳ್ವಿಕೆ :– ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ, ನೀನು ಮಣ್ಣೇ; ಪುನ: ಮಣ್ಣಿಗೆ ಸೇರತಕ್ಕವನಾಗಿದ್ದೀ (ಆದಿ. 3:19).
* ರಕ್ತ ಬಲಿ :– ನಿಮ್ಮ ನಿಮ್ಮ ಗೋತ್ರಗಳ ಪ್ರತಿಯೊಂದು ಮನೆಯವರು ಒಂದೊಂದು ಕುರಿಮರಿಯನ್ನಾಗಲಿ, ಆಡು ಮರಿಯನ್ನಾಗಲಿ ತೆಗೆದುಕೊಳ್ಳಬೇಕು. ಆ ಮರಿಯು ಪೂರ್ಣಾಂಗವಾದ ಒಂದು ವರುಷದ ಗಂಡಾಗಿರಬೇಕು. ಇಸ್ರಾಯೇಲ್ಯರ ಕೂಟಗಳಲ್ಲಿ ಕೊಯ್ಯಬೇಕು. ಅವರು ಅವುಗಳ ರಕ್ತದಲ್ಲಿ ಸ್ವಲ್ಪ ತೆಗೆದು ತಾವು ಆ ಭೋಜನವನ್ನು ಮಾಡುವ ಮನೆ ಬಾಗಲಿನ ಎರಡು ನಿಲುವು ಕಂಬಗಳಿಗೂ ಮೇಲಿನ ಪಟ್ಟಿಗೂ ಹಚ್ಚಬೇಕು (ವಿಮೋ. 12:3–5–7).
* ಬಂಧನ :– ದುಷ್ಟನ ದುಷ್ಕೃತ್ಯಗಳೇ ಅವನನ್ನು ಆಕ್ರಮಿಸುವವು. ಅವನ ಪಾಪ ಪಾಶಗಳೇ ಅವನನ್ನು ಬಂಧಿಸುವವು (ಜ್ಞಾನೋ. 5:22).

ಮುಂದುವರಿಯುವುದು....

ಸಹೋ। ಎಲಿಜಬೆತ್ ಡಿ'ಸೋಜಾ

# "ಭಾರ ವಹಿಸುವವನು"

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು. **"ಇಗೋ, ಪರ್ವತಗಳನ್ನು ರೂಪಿಸಿ ವಾಯುವನ್ನು ಸೃಷ್ಟಿಸಿ ತನ್ನ ಸಂಕಲ್ಪವನ್ನು ಮನುಷ್ಯರಿಗೆ ವ್ಯಕ್ತಗೊಳಿಸಿ ಉದಯವನ್ನು ಅಂಧಕಾರವನ್ನಾಗಿ ಮಾಡಿ ಭೂಮಿಯ ಉನ್ನತ ಪ್ರದೇಶಗಳಲ್ಲಿ ನಡೆಯುವಾತನಿಗೆ ಸೇನಾಧೀಶ್ವರ ದೇವರಾದ ಯೆಹೋವನೆಂಬದೇ ನಾಮಧೇಯ"**.

ಕರ್ತನಲ್ಲಿ ಪ್ರಿಯರೇ, ನಾವು ಆಮೋಸನ ಪ್ರವಾದನ ಗ್ರಂಥವನ್ನು ಧ್ಯಾನಿಸುವಾಗ ದಿಕ್ಕಿಲ್ಲದವರನ್ನು ಹಿಂಸಿಸುವದು, ವಿಗ್ರಹಾರಾಧನೆ, ಕಪಟಭಕ್ತಿ, ಅನೀತಿ, ಮದ್ಯಪಾನ ಹೀಗೆ ಅನೇಕ ಪಾಪಗಳು ಇಸ್ರಾಯೇಲ್ಯರಲ್ಲಿತ್ತು. ದೇವರಿಂದ ನೇಮಿಸಲ್ಪಟ್ಟ ಪ್ರವಾದಿಯು ಇಸ್ರಾಯೇಲ್ಯರ ಪಾಪದ ಕುರಿತು ಧೈರ್ಯವಾಗಿ ತಿಳಿಸಿದನು. ಆಮೋಸನು ಯೆಹೂದ್ಯ ರಾಜ್ಯದವನಾಗಿದ್ದದ್ದರಿಂದ ಆತನ ಸಂದೇಶವನ್ನು ಅನುಸರಿಸಲು ಹಿಂಜರಿದಿರಬಹುದು. ಜನರ ಅಧರ್ಮವನ್ನು ನೇರವಾಗಿ ವಿರೋಧಿಸಿದ್ದರಿಂದ ಪ್ರವಾದಿಯು ಅವರ ಕೋಪಕ್ಕೆ ಕಾರಣನಾದನು. ಒಬ್ಬ ಕುರುಬನಾಗಿದ್ದ ತನಗೆ ದೇವರು ಈ ಸಂದೇಶಗಳನ್ನು ಕೊಟ್ಟನು ಎಂಬ ಉತ್ತಮ ಮನವರಿಕೆಯಿಂದ ಆಮೋಸನು ತನ್ನ ಸೇವೆಯನ್ನು ಧೈರ್ಯವಾಗಿ ಮಾಡಿದನು.

ಯೆರೂಸಲೇಮಿನಿಂದ 12 ಮೈಲು ದಕ್ಷಿಣ ಇರುವ ತೆಕೋವ ಎಂಬ ಗ್ರಾಮವೇ ಆಮೋಸನ ಜನ್ಮಸ್ಥಳ. ಆಮೋಸ ಒಬ್ಬ ಕುರುಬನೂ ಅತ್ತಿ ಹಣ್ಣು ಕೀಳುವವನೂ ಆಗಿದ್ದನು. ಇದರ ಮೂಲಕ ಜೀವನ ನಡೆಸುತ್ತಿದ್ದನು. ತನ್ನ ಕರೆಯ ಕುರಿತು ಆಮೋಸನು ಹೇಳುತ್ತಿರುವದನ್ನು ಗಮನಿಸಿರಿ; ನಾನು ಪ್ರವಾದಿಯಲ್ಲ, ಪ್ರವಾದಿ ಮಂಡಲಿಗೆ ಸೇರಿದವನೂ ಅಲ್ಲ, ನಾನು ಗೊಲ್ಲನು, ಅತ್ತಿ ಹಣ್ಣು ಕೀಳುವವನು; ಯೆಹೋವನು ನನ್ನನ್ನು ಮಂದೆಕಾಯುವದರಿಂದ ತಪ್ಪಿಸಿ ನೀನು ಹೋಗಿ ನನ್ನ ಜನರಾದ ಇಸ್ರಾಯೇಲ್ಯರಿಗೆ ಪ್ರವಾದನೆ ಮಾಡು ಎಂದು ನನಗೆ ಅಪ್ಪಣೆಕೊಟ್ಟನು (ಆಮೋ. 7:14–15).

ಆಮೋಸನು ಹುಟ್ಟಿದ್ದು ದಕ್ಷಿಣ ರಾಜ್ಯವಾದ ಯೆಹೂದ್ಯದಲ್ಲಾದರೂ ಉತ್ತರದ ರಾಜ್ಯವಾದ ಇಸ್ರಾಯೇಲಿನಲ್ಲಿ ಸೇವೆಮಾಡಿದನು. ಆಮೋಸ ಎಂಬ ಹೆಸರಿನ ಅರ್ಥ 'ಭಾರವಹಿಸುವವನು' ಎಂಬುದಾಗಿದೆ. ಹಾಗೆ ಹೆಚ್ಚು ಕಡಿಮೆ ಕ್ರಿ.ಪೂ –760 –750 ಮಧ್ಯೆ ಆಮೋಸನು ಸೇವೆಮಾಡಿದನು ಎಂದು ತಿಳಿದುಕೊಳ್ಳಬಹುದು. ಯರೊಬ್ಬಾಮನ ಕಾಲದಲ್ಲಿ ಎಲ್ಲಾ ರೀತಿಯ ಸಮೃದ್ಧಿಯು ಇಸ್ರಾಯೇಲಿನಲ್ಲಿತ್ತು. ಆದುದರಿಂದ ಜನರು ಸುಖ ಸಮೃದ್ಧಿಯಲ್ಲಿ ಮುಳುಗಿ ಅನೀತಿ ಮತ್ತು ದುಷ್ಟತನಗಳಿಗೆ ಗುಲಾಮರಾಗಿ ದೇವರನ್ನು ಮರೆತು ಜೀವಿಸಿದರು.

ಯುದ್ಧಾಯುಧಗಳಿಗಿಂತ ಜ್ಞಾನವೇ ಉತ್ತಮ.
(ಪ್ರಸಂ. 9:18)

**ಆಮೋಸನ ಸಂದೇಶವು :–** ಪಾಪದ ಫಲವಾಗಿ ಯೆಹೂದ ಮೇಲೆ, ಇಸ್ರಾಯೇಲಿನ ಮೇಲೆ, ಇತರೆ ದೇಶಗಳ ಮೇಲೆ ಬರಲಿರುವ ನ್ಯಾಯ ತೀರ್ಪು ಇದರಲ್ಲಿ ಮುಖ್ಯ ವಿಷಯವಾಗಿದೆ. ಸಕಲ ಮನುಷ್ಯರೂ ತಮ್ಮ ಪಾಪಕೃತ್ಯಗಳಿಗೆ ದೇವರ ಮುಂದೆ ಲೆಕ್ಕಕೊಡಬೇಕಾಗಿ ಬರುತ್ತದೆಂದು ಪ್ರವಾದಿಯು ತಿಳಿಸುತ್ತಿದ್ದಾನೆ.

I. **ಯೆಹೂದ, ಇಸ್ರಾಯೇಲ್ ಮತ್ತು ಇತರ ದೇಶಗಳ ಮೇಲೆ ನ್ಯಾಯತೀರ್ಪು** (ಆಮೋ. 1:3–6:14).

* **ಪ್ರವಾದಿಯು ದಮಸ್ಕಕ್ಕೆ ಬರಲಿರುವ ದಂಡನೆಯ ಕುರಿತು ತಿಳಿಸುತ್ತಿದ್ದಾನೆ** (ಆಮೋ. 1:3–5). ಇದಕ್ಕಿರುವ ಕಾರಣವೂ ಸ್ಪಷ್ಟವಾಗಿದೆ. ಇವರು ಗಿಲ್ಯಾದನ್ನು ಆಕ್ರಮಿಸಿ ಅಲ್ಲಿನ ಜನರನ್ನು ಕ್ರೂರವಾಗಿ ಹಿಂಸಿಸಿದರು.
* **ಗಾಜ (ಫಿಲಿಷ್ಟಿಯ)ದ ಮೇಲಿರುವ ದಂಡನೆ** (ಆಮೋ. 1:6–8). ಇವರು ಇಸ್ರಾಯೇಲ್ಯರನ್ನು ಸೆರೆಹಿಡಿದು ಎದೋಮಿಗೆ ವಶಮಾಡಿದರು.
* **ತೂರ್ ಪಟ್ಟಣಕ್ಕಿರುವ ದಂಡನೆ** (ಆಮೋ. 1:9–10). ಇಸ್ರಾಯೇಲ್ಯರೊಂದಿಗಿರುವ ಒಡಂಬಡಿಕೆಯನ್ನು ಬಿಟ್ಟು ಅವರನ್ನು ಆಕ್ರಮಿಸಿ ಸೆರೆಹಿಡಿದು ಎದೋಮಿಗೆ ವಶಮಾಡಿದರು.
* **ಎದೋಮಿನ ಮೇಲೆ ದಂಡನೆ** (ಆಮೋ. 1:11–12). ಸಹೋದರರ ಮೇಲೆ ಕರುಣೆ ತೋರದೆ ದ್ವೇಷ ಇಟ್ಟುಕೊಂಡದ್ದರಿಂದ ದಂಡಿಸುತ್ತಿದ್ದಾನೆ. ಏದೋಮಿನವರು ಏಸಾವನ ಸಂತತಿಗಳಾಗಿದ್ದಾರೆ. ಏಸಾವನ ಸ್ವಂತ ಸಹೋದರನಾದ ಯಾಕೋಬನ ಸಂತತಿಗಳಾದ ಇಸ್ರಾಯೇಲ್ಯರು ಐಗುಪ್ತದಿಂದ ಬರುತ್ತಿರುವಾಗ ಎದೋಮ್ಯರು ಇಸ್ರಾಯೇಲ್ಯರಿಗೆ ಸಹಾಯಮಾಡದೆ ಅವರ ಮೇಲೆ ಯುದ್ಧಕ್ಕೆ ಬಂದದ್ದು ದೇವರ ಕೋಪಕ್ಕೆ ಕಾರಣವಾಯಿತು.
* **ಅಮ್ಮೋನಿಯರ ಮೇಲಿರುವ ದಂಡನೆ** (ಆಮೋ. 1:13–15). ಅಮ್ಮೋನಿಯರು ಇಸ್ರಾಯೇಲ್ಯರನ್ನು ಆಕ್ರಮಿಸಿ ಗಿಲ್ಯಾದನ್ನು ಕೈ ವಶಮಾಡಿಕೊಳ್ಳಲು ಕರುಣೆಯಿಲ್ಲದೆ ಜನರನ್ನು ಕೊಂದದ್ದು ದೇವರ ಕೋಪಕ್ಕೆ ಕಾರಣವಾಯಿತು.
* **ಮೋವಾಬ್ಯರ ಮೇಲಿರುವ ದಂಡನೆ** (ಆಮೋ. 2:1–3). ಮೋವಾಬ್ಯರ ಪಕ್ಕದ ರಾಜ್ಯವಾದ ಎದೋಮನ್ನು ಆಕ್ರಮಿಸಿ ಅಲ್ಲಿನ ಅರಸನನ್ನು ಕೊಂದು ಸುಟ್ಟುಬಿಟ್ಟದ್ದರಿಂದ ಶಿಕ್ಷೆಗೆ ಅರ್ಹರೆಂದು ಪ್ರವಾದಿಯು ತಿಳಿಸುತ್ತಿದ್ದಾನೆ.
* **ಯೆಹೂದದ ಮೇಲಿರುವ ದಂಡನೆ** (ಆಮೋ. 2:4–5). ಯೆಹೂದವು ದೇವರ ಧರ್ಮಶಾಸ್ತ್ರವನ್ನು ಬಿಟ್ಟು ವಿಗ್ರಹಾರಾಧನೆಯನ್ನು ಮುಂದುವರಿಸಿ, ಅನ್ಯದೇವತೆಗಳನ್ನು ಸೇವಿಸಿದರಿಂದ ಈ ದಂಡನೆ ಅವರಿಗೆ ಉಂಟಾಯಿತು.
* **ಇಸ್ರಾಯೇಲಿನ ದಂಡನೆ** (ಆಮೋ. 2:6–9). ಇವರು ದಿಕ್ಕಿಲ್ಲದವರನ್ನು ಹಿಂಸಿಸಿ ಸಕಲ ಅನೀತಿಯನ್ನು ಅಧರ್ಮವನ್ನು ಮಾಡಿದರು. (ಆಮೋ. 2:10–6–14ರವರೆಗಿರುವ ಭಾಗದಲ್ಲಿ ಪ್ರವಾದಿಯು ನ್ಯಾಯತೀರ್ಪಿನ ಕಾರಣಗಳ ಕುರಿತು ವಿವರಿಸಿ ಮಾನಸಾಂತರ ಹೊಂದಲು ಆಹ್ವಾನಿಸುತ್ತಿದ್ದಾನೆ.

II. **ಆಮೋಸನಿಗೆ ದೊರೆತ ಐದು ದರ್ಶನಗಳು** (ಆಮೋ. 7:1–9–1).

* **ಮಿಡತೆಯ ದರ್ಶನ** (ಆಮೋ. 7:1–3) ದೇಶದ ಪೈರು ಹಚ್ಚೆಯನ್ನು ತಿಂದು ಮುಗಿಸಲು ಯೆಹೋವನು ಮಿಡತೆಗಳನ್ನು ಉಂಟುಮಾಡಿದನು. ಅವು ಎಲ್ಲವನ್ನೂ ತಿಂದು ಮುಗಿಸಿದವು. ಆದರೆ ಪ್ರವಾದಿಯ ಪ್ರಾರ್ಥನೆಯನ್ನು ದೇವರು ಕೇಳಿ ಅದರಿಂದ ಬಿಡಿಸುತ್ತಿದ್ದಾನೆ. ಮಿಡತೆಗಳ ಆಗಮನ ಕಠಿಣವಾದ ಕ್ಷಾಮವನ್ನು ಸೂಚಿಸುತ್ತದೆ.
* **ಅಗ್ನಿ** (ಆಮೋ. 7:4–6) ಮಹಾಸಾಗರವನ್ನು ನುಂಗಿಬಿಡುವ ಅಗ್ನಿಯನ್ನು ಪ್ರವಾದಿಯು ದರ್ಶನದಲ್ಲಿ ನೋಡುತ್ತಿದ್ದಾನೆ. ಪ್ರವಾದಿಯ ಪ್ರಾರ್ಥನೆಯ ಫಲವಾಗಿ ದೇವರು ಅದರಿಂದ ಬಿಡಿಸಿದನು.
* **ನಂತರ ನೂಲುಗುಂಡಿನ ದರ್ಶನ ಕಂಡನು** (ಆಮೋ. 7:7–9) ದೇವರು ಇಸ್ರಾಯೇಲ್ಯರ ಜೀವಿತವನ್ನು ಸೂಕ್ಷ್ಮವಾಗಿ ಪರಿಶೋಧಿಸಿ ಅದು ಸರಿಯಲ್ಲವೆಂದು ಕಂಡನು.
* **ಮಾಗಿದಹಣ್ಣಿನ ದರ್ಶನ** (ಆಮೋ. 8:1–3). ಉಪಯೋಗಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿರುವ ಹಣ್ಣಿಗೆ ಇಸ್ರಾಯೇಲ್ಯರನ್ನು ಹೋಲಿಸಲಾಗಿದೆ. ಮಾಗಿದ ಹಣ್ಣು ಬೇಗ ನಾಶವಾಗುವ ಹಾಗೆ ಜನರಿಗೆ ನಾಶ ಸಂಭವಿಸುತ್ತದೆಂದು ಈ ದರ್ಶನ ತಿಳಿಸುತ್ತದೆ.
* **ಕರ್ತನು ಯಜ್ಞವೇದಿಯ ಪಕ್ಕದಲ್ಲಿನಿಂತಿದ್ದಾನೆ** (ಆಮೋ. 9:1) ವಿಗ್ರಹಾರಾಧನೆಗೆ ಸಿದ್ಧಮಾಡಿರುವ ಸ್ಥಳಕ್ಕೂ ದೇವರು ನ್ಯಾಯತೀರಿಸುತ್ತಾನೆಂದು ಇದು ತಿಳಿಸುತ್ತದೆ.

III. **ದೇವಜನರ ಮುಂದಣ ಸೌಭಾಗ್ಯ** (ಆಮೋ. 9:11–15). ಈ ಪ್ರವಾದನ ಪುಸ್ತಕದಲ್ಲಿ 1:3–9:10ರವರೆಗೆ ದೇವ ಜನರ ಅನೇಕ ಪಾಪಗಳೂ ಅದರ ನಿಮಿತ್ತವಾಗಿರುವ ನ್ಯಾಯತೀರ್ಪಿನ

ಮನುಷ್ಯನ ಭಯ ಉರುಲು; ಯೆಹೋವನ ಭರವಸ ಉದ್ಧಾರ.
(ಜ್ಞಾನೋಕ್ತಿ 29:25)

ಕುರಿತು ತಿಳಿಸಲಾಗಿದೆ. ಆದರೆ 9:11–15ರವರೆಗಿರುವ ವಾಕ್ಯಗಳಲ್ಲಿ ನಿರೀಕ್ಷೆಯ ಮಾತುಗಳನ್ನು ನೋಡಬಹುದು. ಪಾಪ ಮತ್ತು ಅ ನೀತಿಯ ನಿಮಿತ್ತ ಸೆರೆಯಾಗಿ ಹೋಗಬೇಕಾಗಿ ಬಂದ ಜನರನ್ನು ದೇವರು ತಿರುಗಿ ಕರತರುತ್ತಾನೆಂದು ಸಮಾಧಾನ ಮತ್ತು ಐಶ್ವರ್ಯವನ್ನು ಕೊಟ್ಟು ಆಶೀರ್ವದಿಸುತ್ತಾನೆಂದು ಸ್ವಂತ ದೇಶದಲ್ಲಿ ಅವರನ್ನು ನೆಡುತ್ತಾನೆಂದು ಅನೇಕ ವಾಗ್ದಾನಗಳನ್ನು ಕೊಟ್ಟು ಅವರನ್ನು ಆಶೀರ್ವದಿಸುತ್ತಿದ್ದಾನೆ.

ಪ್ರಿಯರೇ, ದೇವರ ಮೇಲಿರುವ ಭಕ್ತಿಯು ಕೇವಲ ಆಚಾರವಾಗಿರದೆ ಜೀವಿತದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಬೇಕು. ಇವತ್ತು ಲೋಕದಲ್ಲಿ ಎಲ್ಲಾ ಜನರು ಭಕ್ತಿ ಮಾಡುತ್ತಾರೆ. ಇವರನ್ನು ಗಮನಿಸುವಾಗ ಇವರಷ್ಟು ಭಕ್ತರು ಲೋಕದಲ್ಲಿ ಯಾರು ಇಲ್ಲ ಎಂದು ಊಹಿಸಬಹುದು ಆದರೆ ದೇವರ ಭಯ ಅವರೊಳಗೆ ಇಲ್ಲ. ಹಾಗಾಗಿ ನಿಮ್ಮ ಜೀವಿತವು ಆ ರೀತಿಯಾಗಿ ಇರಬಾರದು. ವಾಕ್ಯವು ನಮ್ಮನ್ನು ಎಚ್ಚರಿಸುತ್ತದೆ (ಆಮೋ. 4:12). **ಆದಕಾರಣ, ಇಸ್ರಾಯೇಲೇ, ನಾನು ನಿನಗೆ ಮಾಡುತ್ತೇನೆ; ನಾನು ಮಾಡಬೇಕೆಂದಿರುವದರಿಂದ, ಇಸ್ರಾಯೇಲೇ, ನಿನ್ನ ದೇವರ ಬರುವಿಕೆಗೆ ನಿನ್ನನ್ನು ಸಿದ್ಧಮಾಡಿಕೋ** ಪ್ರಿಯರೇ, ಮೋಸಹೋಗಬೇಡಿರಿ. ಲೋಕದ ಸಂಗತಿ ಆಗುಹೋಗಿನ ದೈನಂದಿನ ಘಟನೆ ಕರ್ತನಾದ ಯೇಸುಕ್ರಿಸ್ತನ ರಹಸ್ಯ ಬರುವಿಕೆಯು ಹತ್ತಿರದಲ್ಲಿದೇ ಎಂದು ತಿಳಿದುಕೊಳ್ಳಿರಿ ನೀವು ಸಿದ್ಧರಾಗಿರಿ. ಇತರರನ್ನು ಕ್ರಿಸ್ತನಿಗಾಗಿ ಸಿದ್ಧಪಡಿಸಿರಿ.

ದೀನನಾಗಿ ಜೀವಿಸಿದ ಆಮೋಸನನ್ನು ದೇವರು ತನ್ನ ಪ್ರವಾದಿಯನ್ನಾಗಿ ಮಾಡಿದನು. ಅದೇ ರೀತಿ ನೀವು ಭಯಭಕ್ತಿಯಿಂದ ಜೀವಿಸಿದರೆ ದೇವರು ತನ್ನ ಬಾಯಿಯಾಗಿ ನಿಮ್ಮನ್ನು ಉಪಯೋಗಿಸುತ್ತಾನೆ. ಜ್ಞಾನಿಗೆ, ಪಂಡಿತರಿಗೆ, ಅಧಿಕಾರಿಗೆ, ಕುಟುಂಬಕ್ಕೆ, ಸಭೆಗೆ, ಸಮಾಜಕ್ಕೆ, ದೇಶಕ್ಕೆ ಮರೆಯಾಗಿರಬಹುದು ಅಥವಾ ಅರ್ಥವಾಗದೇ ಇರಬಹುದು. ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನು ಮಾಡನು. ಆಮೋ. 4:7 ಈ ವಾಕ್ಯದ ಪ್ರಕಾರ ನಿಮ್ಮನ್ನು ಇವುಗಳ ಮಧ್ಯದಲ್ಲಿ ಪ್ರವಾದಿಯಾಗಿ ಉಪಯೋಗಿಸುವನು.

ಕರ್ತನು ತಾನೇ ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.


## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**9902334941, 08202002781, 09964070654.**

## ಬೇಕಾಗಿದ್ದಾರೆ

**ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ**

**Administrator & Accountant**

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:**

**0820 – 2002781, 9902334941**


ನಿನ್ನ ಮಗ್ಗುಲಲ್ಲಿ ಸಾವಿರ ಜನರು, ನಿನ್ನ ಬಲಗಡೆಯಲ್ಲಿ ಹತ್ತುಸಾವಿರ ಜನರು ಸತ್ತುಬಿದ್ದರೂ ನಿನಗೇನೂ ತಟ್ಟದು.
(ಕೀರ್ತನೆ 91:7)

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

6) **"ಆತನಿಗಾಗಿ ಏನಾದರೂ ಮಾಡಲು ಸಿದ್ಧರಿರಬೇಕು : (ರೋಮ. 14:8). ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ. ಸತ್ತರೆ ಕರ್ತನಿಗಾಗಿ ಸಾಯುತ್ತೇವೆ. 2 ಕೊರಿ. 5:15 ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು."** ಲೂಕ. 8:1–4 **"ತರುವಾಯ ಆತನು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ ಊರುಗಳಲ್ಲಿಯೂ ಗ್ರಾಮಗಳಲ್ಲಿಯೂ ಸಂಚರಿಸಿದನು. ಆತನ ಸಂಗಡ ಹನ್ನೆರಡು ಮಂದಿ ಶಿಷ್ಯರೂ ಇದ್ದರು. ದೆವ್ವಗಳ ಕಾಟದಿಂದಲೂ ರೋಗಗಳಿಂದಲೂ ಗುಣಹೊಂದಿದ ಕೆಲವು ಹೆಂಗಸರು ಸಹ ಇದ್ದರು. ಈ ಹೆಂಗಸರು ಯಾರಾರೆಂದರೆ ಏಳು ದೆವ್ವಗಳನ್ನು ಬಿಟ್ಟು ಹೋಗಿದ್ದ ಮಗ್ದಲದವಳೆಂಬ ಮರಿಯಳು. ಹೆರೋದನ ಮನೆವಾರ್ತೆಯವನಾದ ಕೂಜನ ಹೆಂಡತಿ ಯೋಹಾನಳು, ಸುಸನ್ನಳು ಇನ್ನು ಬೇರೆ ಅನೇಕರು ಇವರು ತಮ್ಮ ಆಸ್ತಿಯಿಂದ ಆತನಿಗೆ ಕೊಟ್ಟು ಉಪಚಾರ ಮಾಡುತ್ತಿದ್ದರು."** ನಾವು ದೇವರ ರಾಜ್ಯದ ಕಟ್ಟೋಣಕ್ಕಾಗಿ ಏನಾದರೂ ಮಾಡುವವರಾಗಿರಬೇಕು.

7) **ಆತನ ಸೇವೆಮಾಡಬೇಕು :** 1 ಕೊರಿ. 12:4 –6 **"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ; ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು, ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವಕಾರ್ಯ ಸಾಧಿಸುವ ದೇವರು ಒಬ್ಬನೇ."** ಸೇವೆ ಅಂಥ ಹೇಳುವಾಗ ಅದು ಕೇವಲ ಅಪೋಸ್ತಲ, ಪ್ರವಾದಿ, ಸುವಾರ್ತಿಕ, ಸಭಾಪಾಲಕ, ಬೋಧಕರು ಮಾಡುವಂತದ್ದು ಮಾತ್ರ ಸೇವೆ ಅಲ್ಲ. ಸುವಾರ್ತೆ ಹೇಳುವುದು, ಸೇವೆಗೆ ಕೊಡುವುದು, ಬಡವರಿಗೆ ಕೊಡುವುದು, ಸಭಾ ಸೇವೆಯಲ್ಲಿ ಕೈಜೋಡಿಸುವುದು ಹೀಗೆ ಬೇರೆ ಬೇರೆ ರೀತಿಯ ಸೇವೆಗಳನ್ನು ನಾವು ದೇವರಿಗಾಗಿ ಮಾಡಲು ಸಾಧ್ಯವಾಗುತ್ತದೆ.

5) **ತಿರುಗಿ ದ್ರೋಹಿಗಳಾದರು** (ನ್ಯಾಯ. 10:6, 4:1, 6:1). ದ್ರೋಹಿಗಳು ಅಂದರೆ ದೇವರ ಕೃಪೆ ಉಪಕಾರಗಳನ್ನು ಮರೆತು ಅನ್ಯದೇವತೆಗಳನ್ನು ಪೂಜಿಸುವುದು ವಿಗ್ರಹಾರಾಧನೆ ಮಾಡುವಂತದ್ದು ಆಗಿದೆ ಮತ್ತು ಸೃಷ್ಟಿಯನ್ನು ಆರಾಧಿಸಿ ಸೃಷ್ಟಿಕರ್ತನನ್ನು ರೇಗಿಸುವಂತದ್ದು ಆಗಿದೆ. ಅನೇಕ ಸಲ ದೇವರ ವಾಕ್ಯವನ್ನು ನಾವು ಕೇಳಿ ಓದಿ ತಿಳಿದರೂ ಮಂತ್ರವಾದಿಗಳ ಬಳಿಗೆ ಹೋಗುವುದು, ತಾಯತ ಕಟ್ಟುವುದು, ವಿಗ್ರಹಗಳನ್ನು ಆರಾಧಿಸುವುದು ಇವೆಲ್ಲಾ ಮಾಡುತ್ತೇವೆ. ಆಗ ಸೃಷ್ಟಿಕರ್ತನಾದ ದೇವರು ದು:ಖಗೊಳ್ಳುತ್ತಾನೆ. ಯೆರೆ. 2:13 **ನನ್ನ ಜನರು ಎರಡು ಅಪರಾಧಗಳನ್ನು ಮಾಡಿದ್ದಾರೆ. ಜೀವಜಲದ ಬುಗ್ಗೆಯಾದ ನನ್ನನ್ನು ಬಿಟ್ಟಿದ್ದಾರೆ. ತಮಗೋಸ್ಕರ ತೊಟ್ಟಿಗಳನ್ನು ನೀರು ನಿಲ್ಲದ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ. "ಆಕಾಶಮಂಡಲವೇ, ಆಲಿಸು! ಭೂಮಂಡಲವೇ, ಕೇಳು! ಯೆಹೋವನು ಮಾತಾಡುತ್ತಿದ್ದಾನೆ; ನಾನು ಸಾಕಿ ಸಲಹಿದ ಮಕ್ಕಳೇ ನನಗೆ ದ್ರೋಹಮಾಡಿದ್ದಾರೆ. ಎತ್ತು ಯಜಮಾನನನ್ನು, ಕತ್ತೆ ಒಡೆಯನ [ಕೊಟ್ಟಿಗೆಯ] ಗೋದಲಿಯನ್ನು ತಿಳಿದಿರುವವು; ಇಸ್ರಾಯೇಲ್ ಜನರಿಗೋ ತಿಳುವಳಿಕೆಯಿಲ್ಲ, ನನ್ನ ಪ್ರಜೆಯು ಆಲೋಚಿಸುವುದಿಲ್ಲ. ಪಾಪಿಷ್ಠಜನವೇ, ಅಧರ್ಮಭಾರಹೊತ್ತಿರುವ ಪ್ರಜೆಯೇ, ದುಷ್ಟಜಾತಿಯೇ, ದ್ರೋಹಿಗಳಾದ ಮಕ್ಕಳೇ, ನಿಮ್ಮ ಗತಿಯನ್ನು ಏನು ಹೇಳಲಿ! ಯೆಹೋವನನ್ನು ತೊರೆದಿದ್ದಾರೆ, ಇಸ್ರಾಯೇಲ್ಯರ ಸದಮಲಸ್ವಾಮಿಯನ್ನು ಧಿಕ್ಕರಿಸಿದ್ದಾರೆ, ಆತನಿಗೆ ಬೆನ್ನುಮಾಡಿ ಬೇರೆಯಾಗಿದ್ದಾರೆ"** (ಯೆಶಾ. 1:2–4). **"ಉಪದ್ರವಗಳಿಂದ ಸಾಯದೆ ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ; ಅವರು ದೆವ್ವಗಳ ಪೂಜೆಯನ್ನೂ ಬಂಗಾರ ಬೆಳ್ಳಿ ತಾಮ್ರ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟು ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ ಇದಲ್ಲದೆ ತಾವು ನಡಿಸುತ್ತಿದ್ದ ಕೊಲೆ ಮಾಟ ಜಾರತ್ವ ಕಳ್ಳತನ ಇವುಗಳೊಳಗೆ ಒಂದನ್ನೂ ಬಿಟ್ಟು ಮಾನಸಾಂತರಮಾಡಿಕೊಳ್ಳಲಿಲ್ಲ"** (ಪ್ರಕ. 9:20).

ದೇವರು ತನ್ನ ಧ್ವನಿಯಿಂದ ಅದ್ಭುತವಾಗಿ ಗುಡುಗುವನು; ನಾವು ಗ್ರಹಿಸಲಾಗದ ಮಹಾಕಾರ್ಯಗಳನ್ನು ನಡಿಸುವನು. (ಯೋಬ 37:5)

6) ನ್ಯಾಯ. 13:16 ಅಧ್ಯಾಯಗಳು ಹಾಗೂ 19,20 ಅಧ್ಯಾಯಗಳು ಜಾರತ್ವ, ವ್ಯಭಿಚಾರ ಪಾಪಗಳನ್ನು ನೋಡುತ್ತೇವೆ. ದೇವರು ಬೇಸರಗೊಳ್ಳುವ ಹಾಗೂ ಕೋಪಗೊಳ್ಳುವ ಇನ್ನೊಂದು ಪಾಪ ಜಾರತ್ವ ಹಾಗೂ ವ್ಯಭಿಚಾರವಾಗಿದೆ. ಸೊದೋಮ ಗೋಮರವನ್ನು ದೇವರು ನಾಶಪಡಿಸಲು ಕಾರಣ ಕೂಡ ವ್ಯಭಿಚಾರ ಪಾಪವಾಗಿತ್ತು. ಸಂಸೋನನು ವ್ಯಭಿಚಾರಪಾಪದ ನಿಮಿತ್ತ ತನ್ನ ಅಭಿಷೇಕ, ಕರೆ ಹಾಗೂ ಸೇವೆಯನ್ನು ನಷ್ಟಪಡಿಸಿಕೊಂಡು ಹಾಸ್ಯಕ್ಕೆ ಗುರಿಯಾದನು. ಸೊಲೋಮೋನನು ಅನ್ಯಜಾತಿಯ ಹೆಂಗಸರನ್ನು ಮದುವೆಯಾಗಿ ವಿಗ್ರಹಾರಧಕನಾದನು. ದಾವೀದನು ಬತ್ಷೆಬೆಯೊಂದಿಗೆ ವ್ಯಭಿಚಾರಮಾಡಿ ದೇವರ ಕೋಪಕ್ಕೆ ಗುರಿಯಾಗಿ ತನ್ನ ಕುಟುಂಬದ ಮೇಲೆ ಶಾಪಗಳನ್ನು ಬರಮಾಡಿಕೊಂಡನು. **"ಈಗ, ಕಂದಾ, ನನ್ನ ಕಡೆಗೆ ಕಿವಿಗೊಡು, ನನ್ನ ಮಾತುಗಳನ್ನು ಆಲಿಸು. ನಿನ್ನ ಹೃದಯವು ಅವಳ ನಡತೆಯ ಕಡೆಗೆ ತಿರುಗದಿರಲಿ, ತಪ್ಪಿ ಹೋಗಿ ಅವಳ ಮಾರ್ಗದಲ್ಲಿ ನಡೆಯಬೇಡ. ಅವಳಿಂದ ಗಾಯಪಟ್ಟು ಬಿದ್ದವರು ಬಹು ಮಂದಿ, ಹತರಾದವರೋ ಲೆಕ್ಕವೇ ಇಲ್ಲ. ಅವಳ ಮನೆಯು ಪಾತಾಳದ ದಾರಿ, ಅದು ಮೃತ್ಯುವಿನ ಅಂತಪುರಕ್ಕೆ ಇಳಿದುಹೋಗುತ್ತದೆ"** (ಜ್ಞಾನೋ. 7:24–27). **"ಯುದ್ಧಾಯುಧಗಳಿಗಿಂತ ಜ್ಞಾನವೇ ಉತ್ತಮ ಒಬ್ಬ ಪಾಪಿಯು ಬಹು ಶುಭವನ್ನು ಹಾಳುಮಾಡುವನು"** (ಪ್ರಸ. 9:18). **"ಗಂಡಹೆಂಡಿರ ಸಂಬಂಧವು ನಿಷ್ಕಲಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ"** (ಇಬ್ರಿ. 13:4).

7) ನ್ಯಾಯ. 6:10 ದೇವರ ಮಾತಿಗೆ ಪುನ: ಪುನ: ಅವಿಧೇಯರಾದರು : – 1 ಸಮು. 15:22–23 ದೇವರು ವಿಧೇಯತೆಗೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುವುದಿಲ್ಲವೆಂದು ನೋಡಬಹುದು. ಅವಿಧೇಯತೆಯು ಮಂತ್ರತಂತ್ರಗಳಷ್ಟೇ ಕೆಟ್ಟದ್ದೆಂದು ತಿಳಿದುಕೊಳ್ಳಬಹುದು. ಇಸ್ರಾಯೇಲರು ಪುನ: ಪುನ: ದೇವರಿಗೆ ಅವಿಧೇಯರಾಗುವುದು ಅವರ ಮೊಂಡತನವನ್ನು ಎತ್ತಿತೋರಿಸುತ್ತದೆ. ನಾವು ಸಹ ಅನೇಕರು ರಕ್ಷಣೆಯ ಸುವಾರ್ತೆ ಎಷ್ಟು ಕೇಳಿದರೂ ಮಾನಸಾಂತರಪಟ್ಟು ಯೇಸುಕ್ರಿಸ್ತನನ್ನು ಅಂಗೀಕಾರ ಮಾಡುವುದಿಲ್ಲ, ದೀಕ್ಷಾಸ್ನಾನದ ಬಗ್ಗೆ ಎಷ್ಟು ಕೇಳಿದರು ದೀಕ್ಷಾಸ್ನಾನ ತೆಗೆದುಕೊಳ್ಳುವುದಿಲ್ಲ. ದೇವರು ನಮ್ಮನ್ನು ಆಶೀರ್ವದಿಸಬೇಕಾದರೆ ಆತನ ವಾಕ್ಯಕ್ಕೆ ನಾವು ವಿಧೇಯರಾಗಬೇಕು. ದೇವರ ಮಾತಿಗೆ ವಿಧೇಯರಾದ ನೋಹ, ಅಬ್ರಹಾಮ, ಇಸಾಕ, ಯಾಕೋಬ, ಯೋಸೇಫ, ದಾವೀದ ಮತ್ತು ಅನೇಕ ಭಕ್ತರನ್ನು ಕರ್ತನು ಆಶೀರ್ವದಿಸಿದ್ದನ್ನು ಸತ್ಯವೇದದಲ್ಲಿ ಕಾಣುತ್ತೇವೆ. ದೇವರ ಮಕ್ಕಳಾದ ನಾವು ದೇವರಿಗೆ ವಿಧೇಯರಾಗುವುದರ ಮೂಲಕವಾಗಿ ಮಾತ್ರ ಆಶೀರ್ವಾದಗಳನ್ನು ಕಾಣಲು ಸಾಧ್ಯವಾಗುತ್ತದೆ.

ಕೀರ್ತ. 106:22–25–34–35–39–43 ರಲ್ಲಿ ಪದೇ ಪದೇ ಇಸ್ರಾಯೇಲರು ದೇವರಿಗೆ ಅವಿಧೇಯರಾಗಿ ಅನೇಕ ಸಮಸ್ಯೆಗಳನ್ನು ತಮ್ಮ ಜೀವಿತದಲ್ಲಿ ಬರಮಾಡಿಕೊಳ್ಳುವುದನ್ನು ಕಾಣಬಹುದು. 1 ಕೊರಿ. 10:11 ಹೇಳುತ್ತದೆ, **"ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ."** ಹೌದು ಅಂದು ಇಸ್ರಾಯೇಲರು ದೇವರ ಮಾತಿಗೆ ಅವಿಧೇಯರಾಗಿ ಆಶೀರ್ವಾದಗಳನ್ನು ಕಳೆದುಕೊಂಡದ್ದು ಮಾತ್ರವಲ್ಲ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾದರು. ವೈರಿಗಳ ಅಕ್ರಮಣಕ್ಕೆ ಗುರಿಯಾದರು, ಎಲ್ಲಾದರಲ್ಲೂ ಸೋಲನ್ನು ಅನುಭವಿಸಿದರು. ಕಣ್ಣೀರ ಕೋಡಿ ಹರಿಯಿತು. ಇಂದು ನಾವು ನಮ್ಮನೇ ಪರೀಕ್ಷಿಸಿಕೊಳ್ಳುವ ದೇವರ ವಾಕ್ಯಕ್ಕೆ ನಾವು ಸಂಪೂರ್ಣ ವಿಧೇಯರಾಗುತ್ತಿದ್ದೇವಾ? ಒಂದು ವೇಳೆ ಪ್ರಿಯರೇ, ನಿಮ್ಮ ಜೀವಿತದಲ್ಲಿ ನಾನಾ ಸಮಸ್ಯೆಗಳಿರುವುದಾದರೆ ಒಂದು ಸಲ ದೇವರ ಮುಂದೆ ನಿಮ್ಮನ್ನು ಪರೀಕ್ಷಿಸಿಕೊಳ್ಳಿರಿ. ಪಶ್ಚಾತ್ತಾಪ ಪಟ್ಟು ದೇವರ ಮುಂದೆ ಕ್ಷಮೆ ಕೇಳಿಕೊಳ್ಳಿರಿ. ಕೃಪಾಳುವಾದ ಕರ್ತನು ಖಂಡಿತವಾಗಿ ನಿಮ್ಮನ್ನು ಕ್ಷಮಿಸಿ ಆಶೀರ್ವದಿಸುವನು.

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,
**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು
(ಮತ್ತಾ. 13:43).

## ಮಕ್ಕಳ ಸ್ವರ

1. ಹೋಶೇಯನು ಯಾರ ಮಗನು ಅಥವಾ ಹೋಶೇಯನ ತಂದೆ ಯಾರು?
2. ಯೋವೇಲನು ಯಾರ ಮಗನು ?
3. ಆಮೋಸನು ಯಾವ ಊರಿನವನು ಮತ್ತು ಯಾವ ಕೆಲಸ ಮಾಡುತ್ತಿದ್ದ?
4. ಯೋನನ ಊರು ಯಾವುದು? ಮತ್ತು ಯಾರ ಮಗನು?
5. ಮೀಕನ ಊರು ಯಾವುದು?
6. ನಹೂಮನ ಊರು ಯಾವುದು?
7. ಜೆರುಬ್ಬಾಬೆಲನ ತಂದೆಯ ಹೆಸರೇನು?
8. ಮಹಾಯಾಜಕನಾದ ಯೆಹೋಶುವನ ತಂದೆಯ ಹೆಸರೇನು?
9. ಜೆಕರ್ಯನು ಯಾರ ಮಗನು?
10. ಮೋವಾಬ್ಯರ ಅರಸನಾದ ಬಾಲಾಕನು ಯಾರ ಮಗನು ?

### ಜನವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1. ನೂತನ ಯೆರೂಸಲೇಮು ಅಥವಾ ಚೀಯೋನ್ (ಪ್ರಕ. 21:26).
2. ಎಲೀಷನನ್ನು (2 ಅರಸು. 2:23).
3. ರೂತಳು (ಮತ್ತಾ. 1:5).
4. ಆಮೋಚನು (ಯೆಶಾ. 1:1).
5. ಅನಾತೋತ್; ಹಿಲ್ಕೀಯನು (ಯೆರೆ. 1:1).
6. ಬೂಜಿಯ (ಯೆಹೆ. 1:3).
7. ಅಶ್ಪೆನಜನಿಗೆ (ದಾನಿ. 1:3).
8. ಬೇಲ್ತೆಶಚ್ಚರ್ (ದಾನಿ. 1:7)
9. ಅರುವತ್ತೆರಡು (ದಾನಿ. 5:31).
10. ಅಹಷ್ವೇರೋಷ (ದಾನಿ. 9:1).

## ಡಿಜಿಎಮ್ ಬೇತೇಲ್ ಅಂಕಣ

- ಜನವರಿ 2013 2–22ರವರೆಗೆ ನಡೆದ 21 ದಿವಸದ ಉಪವಾಸ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು. ಈ ಕೂಟದಲ್ಲಿ ಅನೇಕ ದೇವ ಸೇವಕರು ಬಂದು ವಾಕ್ಯ ಸಂದೇಶವನ್ನು ನೀಡಿದರು.
- ಡಿ.ಜಿ.ಎಂ.ಬಿ.ಸಿ ಟ್ರಸ್ಟ್ (ರಿ), ಯೇಸುಪುರ, ಶಂಕರಪುರ ಇದರ ವತಿಯಿಂದ ಬೇತ್ಸಥಾ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆಯು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು.
- ಡಿಜಿಎಮ್ ಬೇತೇಲ್ ಚರ್ಚ್ ಸಭೆಯ 13 ನೇ ವಾರ್ಷಿಕೋತ್ಸವನ್ನು ಜನವರಿ 26ರಂದು ಬೇತೇಲ್ ಸಭೆಯಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಸ್ಫೂರ್ತಿ ವಿಶ್ವಾಸದಮನೆಯ ಮಕ್ಕಳು ಮತ್ತು ಸಭೆಯ ಮಕ್ಕಳು, ಸಭೆಯ ಎಲ್ಲಾ ವಿಶ್ವಾಸಿಗಳು ಅನೇಕ ಕಾರ್ಯಕ್ರಮವನ್ನು ನೀಡಿದರು.
- ಸಹೋ॥ ಪೀಟರ್ ಡಿ'ಸೋಜಾ ಹಾಗೂ ಸಹೋ॥ ಶಾರದಬಾಯಿ (ಸೀತಮ್ಮ)ರವರು ವಿಶ್ವಾಸದಮನೆಯ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಗುಣಮುಖರಾಗಿ ಮನೆಗೆ ತೆರಳಿದ್ದಾರೆ.

ನಿಮ್ಮನ್ನು ತಾಕುವವನು ಯೆಹೋವನ ಕಣ್ಣು ಗುಡ್ಡನ್ನು ತಾಕುವವನಾಗಿದ್ದಾನೆ
(ಜೆಕ. 2:8).